# ಸತ್ಯಪಥದ ಸವಾಲುಗಳು

✍ ಮೌ। ಸದ್ರುದ್ದೀನ್ ಇಸ್ಲಾಹಿ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

ಇಸ್ಲಾಮೀ ಆಂದೋಲನಗಳು ಲೋಕದಾದ್ಯಂತ ಇಸ್ಲಾಮಿನ ಪುನರುತ್ಥಾನ ಹಾಗೂ ಧರ್ಮಸಂಸ್ಥಾಪನೆಯ ಕಾರ್ಯದಲ್ಲಿ ನಿರತವಾಗಿದೆ. ಆ ಮಾರ್ಗವು ಬಹಳ ದುರ್ಗಮವಾಗಿದೆ. ಸತ್ಯಮಾರ್ಗದಲ್ಲಿ ದೃಢಚಿತ್ತತೆಯಿಂದ ಮುನ್ನಡೆಯಲು ಆಂದೋಲನದ ಕಾರ್ಯಕರ್ತರಲ್ಲಿ ವೈಯಕ್ತಿಕವಾಗಿಯೂ ಸಾಮಾಜಿಕವಾಗಿಯೂ ಕೆಲವು ಗುಣಗಳನ್ನು ಮೈಗೂಡಿಸಬೇಕಾಗಿದೆ ಮತ್ತು ಕೆಲವು ಗುಣಗಳನ್ನು ವರ್ಜಿಸಬೇಕಾಗಿದೆ.

ಇಸ್ಲಾಮೀ ಆಂದೋಲನದ ಕಾರ್ಯಕರ್ತರು ಧರ್ಮಸಂಸ್ಥಾಪನೆಗಾಗಿ ತಮ್ಮನ್ನು ಮುಡಿಪಾಗಿಸಬೇಕಾದವರು ಜನರಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸುವುದರ ಜೊತೆಗೆ ತಮ್ಮನ್ನು ಸ್ವಯಂ ಸಂಸ್ಕರಿಸಿ ಇತರರನ್ನೂ ಸಂಸ್ಕರಿಸುವ ಮೂಲಕ ತಮ್ಮ ಗುರಿಯನ್ನು ಸಾಧಿಸಬೇಕಾಗುತ್ತದೆ. ಕಾರ್ಯಕರ್ತರ ಚಾರಿತ್ರ್ಯ, ಗುಣನಡತೆ ಹಾಗೂ ಅವರ ಕಾರ್ಯವಿಧಾನದಲ್ಲಿ ಕಂಡು ಬರುವ ಯಾವುದೇ ಲೋಪದೋಷಗಳು ಹಾಗೂ ನ್ಯೂನತೆಗಳು ಇಸ್ಲಾಮೀ ಆಂದೋಲನ ಮಾರಕವಾಗಬಲ್ಲುದು.

ಆಂದೋಲನ ಮಾರ್ಗದಲ್ಲಿ ಅತಿದೊಡ್ಡ ತೊಡಕಾಗಬಲ್ಲ ಅತಿಪ್ರಧಾನ ಹಾಗೂ ಮಾರಕವಾದ ಅಪಾಯಗಳನ್ನು ಉಪಭೂಖಂಡದ ಘನವಿದ್ವಾಂಸರಾಗಿದ್ದ ಮೌಲನಾ ಸದ್ರುದ್ದೀನ್ ಇಸ್ಲಾಹಿಯವರು ಆರಂಭಕಾಲದಲ್ಲೇ ತಮ್ಮ ''ರಾಹೆ ಹಕ್‌ಕೇ ಮುಹ್ಲಿಕ್ ಖತ್ರೇ'' ಎಂಬ ತಮ್ಮ ಉರ್ದು ಕೃತಿಯಲ್ಲಿ ಎತ್ತಿ ತೋರಿಸಿದ್ದಾರೆ. ಅದರ ಕನ್ನಡಾನುವಾದವೇ 'ಸತ್ಪಥದ ಸವಾಲುಗಳು' ಎಂಬ ಈ ಕೃತಿ.

ಇಸ್ಲಾಮಿನ ಏಳಿಗೆಗಾಗಿ ಪರಿಶ್ರಮಿಸುತ್ತಿರುವ ಪ್ರತಿಯೊಂದು ವ್ಯಕ್ತಿಗೂ, ಪ್ರತಿಯೊಂದು ಸಂಘಟನೆಗೂ ಇದೊಂದು ಕೈದೀವಟಿಗೆಯಾಗಬಲ್ಲದು. ಇದರ ಅಧ್ಯಯನವು ಅದಕ್ಕೆ ಸಹಾಯಕವಾಗಲೆಂದು ಹಾರೈಸುತ್ತೇವೆ.

— ಶಾಂತಿ ಪ್ರಕಾಶನ

# ಇಸ್ಲಾಮೀ ಆಂದೋಲನ ಜಾಗೃತವಾಗಿರಬೇಕಾದ ಸತ್ಯಮಾರ್ಗದ ಮಾರಕ ಅಪಾಯಗಳು

ಒಂದು ಆಂದೋಲನದ ಜೀವನ ಮತ್ತು ಶಕ್ತಿಗೆ ಕಾರಣವಾದ ಕೈಗಳು ಅದರೊಂದಿಗಿರುವುದರಿಂದ ಮಾತ್ರ ಆಂದೋಲನವು ಯಶಸ್ವಿಯಾಗಿ ಸಾಗಬಲ್ಲುದು. ಒಂದು ವೇಳೆ ಅದು ಎಲ್ಲಾದರೂ ಸ್ಥಗಿತಗೊಂಡು ಬಿಟ್ಟರೆ ಅಥವಾ ಒಂದು ಹಂತಕ್ಕೆ ತಲುಪಿದ ನಂತರ ಗೊತ್ತು ಗುರಿಯಿಲ್ಲದೆ ಅಲೆದಾಡ ತೊಡಗಿದರೆ, ಅದು ತನ್ನ ಕೈಗಳನ್ನು ಬೇರೆ ಕೈಗಳಿಗೆ ಒಪ್ಪಿಸಿರುವುದೇ ಕಾರಣವಾಗಿದೆ. ಆ ಕೈಗಳು ಈ ಆಂದೋಲನವನ್ನು ದೌರ್ಬಲ್ಯ, ಛಿದ್ರತೆ ಮತ್ತು ಮರಣಕ್ಕೆ ನೂಕಬಹುದು. ಇದೊಂದು ಸಾಮಾನ್ಯ ನಿಯಮವಾಗಿದೆ. ಆಂದೋಲನಗಳ ಇತಿಹಾಸದಲ್ಲಿ ಇದಕ್ಕೆ ಅಪವಾದ ಕಾಣಸಿಗುವುದಿಲ್ಲ, ಅದು ಸತ್ಯದ ಆಂದೋಲನವಾದರೂ ಮಿಥ್ಯದ ಆಂದೋಲನವಾದರೂ ಸರಿ. ಹಾಗೆ ಸಿಗುವುದು ಸಾಧ್ಯವೂ ಇಲ್ಲವೆಂದು ನಮ್ಮ ಸಾಮಾನ್ಯ ಬುದ್ಧಿ ಹೇಳುತ್ತದೆ. ಇದೊಂದು ಸಮಗ್ರ ಹಾಗೂ ಶಾಶ್ವತ ನಿಯಮವಾಗಿದೆ. ಇಂದೋ ನಾಳೆಯೋ ಯಾವುದೇ ಆಂದೋಲನವು ಇದಕ್ಕೆ ಅಪವಾದವಾಗಬಹುದೆಂದು ಹೇಳುವಂತಿಲ್ಲ. ಆದ್ದರಿಂದ ತನ್ನ ನಾವೆಯನ್ನು ದಡ ಮುಟ್ಟಿಸಬೇಕೆಂದು ಬಯಸುವ ಆಂದೋಲನವು ಈ ನಿಯಮವನ್ನು ಪ್ರಾಮಾಣಿಕವಾಗಿ ಅಂಗೀಕರಿಸಬೇಕು; ಅನ್ಯಥಾ ಪ್ರಕೃತಿ ನಿಯಮವನ್ನು ಮೀರಿ ನಡೆದರೆ ಉಂಟಾಗಬಹುದಾದಂತಹ ದುಷ್ಪರಿಣಾಮವನ್ನೆದುರಿಸಲು ತಯಾರಿರಬೇಕು. ತತ್ವ ಸಿದ್ಧಾಂತದ ಸತ್ಯತೆ ಮತ್ತು ಆಕರ್ಷಣೆಯು ಅದನ್ನು ಈ ದುರ್ಗತಿಯಿಂದ ರಕ್ಷಿಸಲಾರದು.

ಆದ್ದರಿಂದಲೇ ಪ್ರವಾದಿ ಮುಹಮ್ಮದ್(ಸ) ಅವರನ್ನು ಇಸ್ಲಾಮಿನ ಸಂದೇಶ ಕೊಟ್ಟು ಅದರ ಸಂಸ್ಥಾಪನೆಗಾಗಿ ನೇಮಿಸಿ ಕಳಿಸುವಾಗ ಅವರಿಗೂ ಅವರ

ಸಂಗಾತಿಗಳಿಗೂ ಈ ವಸ್ತು ಸ್ಥಿತಿಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಡಲಾಗಿತ್ತು. ಮಾತ್ರವಲ್ಲ ಅದನ್ನು ಪದೇ ಪದೇ ನೆನಪಿಸಲಾಗುತ್ತಿತ್ತು. ಈ ಕರ್ತವ್ಯಗಳನ್ನು ನಿರ್ವಹಿಸಲಿಕ್ಕಾಗಿ ಕೆಲವು ಸದ್ಗುಣಗಳು ನಿಮ್ಮಲ್ಲಿರಬೇಕಾದುದು ಅನಿವಾರ್ಯವೆಂದೂ ಕೆಲವು ದುರ್ಗುಣಗಳನ್ನು ತೋರಿಸಿ ಅವು ನಿಮ್ಮಲ್ಲಿದ್ದರೆ ನಿಮಗೆ ಸೋಲು ಕಟ್ಟಿಟ್ಟ ಬುತ್ತಿ ಎಂದು ತಿಳಿಸಲಾಯಿತು. ಅಲ್ಲಿಗೇ ಮುಗಿಸದೆ ಗತ ಜನಾಂಗಗಳು ಮತ್ತು ಸಮುದಾಯಗಳ ಉತ್ಥಾನ-ಪತನಗಳ ಚರಿತ್ರೆಯನ್ನೇ ಅವರ ಮುಂದೆ ತೆರೆದಿಡಲಾಗಿದೆ. ವಿಶೇಷವಾಗಿ ನಿಕಟಪೂರ್ವ ಸಮುದಾಯ(ಬನೀ ಇಸ್ರಾಈಲ್)ದ ಚರಿತ್ರೆಯನ್ನು ವಿಸ್ತೃತವಾಗಿ ವಿವರಿಸಲಾಗಿದೆ. ಆ ಸಮುದಾಯವನ್ನು ಮುಳುಗಿಸಿ ಬಿಟ್ಟಿದ್ದ ಒಂದೊಂದು ಕೃತ್ಯವನ್ನೂ ಎತ್ತಿ ತೋರಿಸಿ, ಮುಂದೆ ಯಾವುದಾದರೂ ಸಮುದಾಯವು ಇದೇ ಕೃತ್ಯಗಳನ್ನೆಸಗಿದರೆ ನಾವು ಅದನ್ನು ಮುಳುಗಿಸಿಯೇ ಬಿಡುವೆವು ಎಂಬ ಎಚ್ಚರಿಕೆಯನ್ನು ನೀಡಲಾಗಿದೆ. ಈ ರೀತಿ ಗತ ಸಮುದಾಯಗಳ ದುರಂತ ಕಥೆಗಳನ್ನು ಪವಿತ್ರ ಕುರ್‌ಆನ್ ಕಿಯಾಮತ್‌ನ ವರೆಗೂ ತನ್ನೊಡಲಲ್ಲಿ ಸುರಕ್ಷಿತವಾಗಿರಿಸಿದೆ. ಇದು ಮುಸ್ಲಿಮ್ ಸಮುದಾಯಕ್ಕೆ ಸ್ಪಷ್ಟ ಎಚ್ಚರಿಕೆಯಾಗಿದೆ. ಅದು ತನ್ನನ್ನು ಅನುಸರಿಸುವವರಿಗೆ ಗತ ಸಮುದಾಯಗಳ ಈ ಪಾಠ ಬೋಧಕ ವೃತ್ತಾಂತಗಳನ್ನು ತಿಳಿಸುವುದರ ಜೊತೆಗೆ ಈ ಕೆಳಗಿನ ಎಚ್ಚರಿಕೆಯನ್ನೂ ನೀಡುತ್ತದೆ:

**''ಅಲ್ಲಾಹನನ್ನು ಮರೆತಾಗ ತಮ್ಮನ್ನೇ ಮರೆತು ಬಿಟ್ಟವರಂತೆ ನೀವಾಗಬಾರದು''**

**(ಪವಿತ್ರ ಕುರ್‌ಆನ್, 59:19)**

**''ಸುವ್ಯಕ್ತ ನಿದರ್ಶನಗಳು ಪ್ರಾಪ್ತಿಯಾದ ನಂತರ ಭಿನ್ನಾಭಿಪ್ರಾಯಗಳಲ್ಲಿ ಸಿಲುಕಿ ವಿಭಿನ್ನ ಪಕ್ಷ ಪಂಗಡಗಳಲ್ಲಿ ಹರಿ ಹಂಚಿ ಹೋದವರಂತೆ ನೀವಾಗಬಾರದು.''**

**(ಪವಿತ್ರ ಕುರ್‌ಆನ್, 3:105)**

ಈ ದೈವಿಕ ಉಪದೇಶವನ್ನು ಬಿಗಿ ಹಿಡಿದು ಕುರ್‌ಆನಿನ ಎಚ್ಚರಿಕೆಯನ್ನು ಸಂಪೂರ್ಣ ಪಾಲಿಸುವುದರಲ್ಲಿ ಈ ಸಮುದಾಯದ ಹಿತವಿತ್ತು. ಇಡೀ ಜಗತ್ತೇ ತಿಳಿದಿರುವಂತೆ, ಈ ಸಮುದಾಯವು ತನ್ನ ಕರ್ತವ್ಯವನ್ನು ಈಡೇರಿಸಿದಾಗ, ವಿಜಯವು ಅದರ ಕಾಲಬುಡಕ್ಕೆ ಬಂದು ಬೀಳ ತೊಡಗಿತು. ಇಸ್ಲಾಮಿನ ಸಂದೇಶವು ಜನಮನಗಳನ್ನು ಗೆಲ್ಲುತ್ತಾ ಸಾಗಿತೆಂಬುದಕ್ಕೆ ಚರಿತ್ರೆ ಸಾಕ್ಷಿಯಾಯಿತು. ಆದರೆ ಮುಂದೆ

ಅದು ಈ ಮಾರ್ಗದರ್ಶನ ಮತ್ತು ಎಚ್ಚರಿಕೆಯನ್ನು ಕಡೆಗಣಿಸಿದಾಗ ಮತ್ತು ಅವರನ್ನು ಪದೇ ಪದೇ ತಡೆಯಲಾಗುತ್ತಿದ್ದ ಅದೇ ಮಾರ್ಗಗಳಲ್ಲಿ ನಡೆಯ ತೊಡಗಿದಾಗ, ಈ ಕರ್ತವ್ಯ ಚ್ಯುತಿ ಮತ್ತು ನಿರ್ಲಕ್ಷ್ಯದ ಸ್ವಾಭಾವಿಕ ಪರಿಣಾಮವಾಗಿರುವ ಅಧಃಪತನ ಮತ್ತು ಸೋಲಿನಿಂದ ಪಾರಾಗಲು ಅದರಿಂದಾಗಲಿಲ್ಲ.

ಕುರ್‌ಆನಿನ ಈ ಎಚ್ಚರಿಕೆಯು ಮೌಲಿಕವೂ ಶಾಶ್ವತವೂ ಆಗಿತ್ತು. ಈ ಸಮುದಾಯ ಅಥವಾ ಅದರ ಯಾವುದಾದರೊಂದು ವಿಭಾಗ ತನ್ನ ಧ್ಯೇಯೋದ್ದೇಶದ ಕಡೆಗೆ ಮರಳಿದರೆ ತನ್ನ ಪ್ರಯಾಣದ ಆರಂಭದಿಂದ ತನ್ನ ಗುರಿ ಸಾಧಿಸುವ ತನಕ ಹಾಗೂ ಅದರ ನಂತರವೂ ಈ ಎಚ್ಚರಿಕೆಗೆ ತಕ್ಕುದಾದ ಮಹತ್ವ ನೀಡುವುದು ಮತ್ತು ಸಮುದಾಯಗಳ ಪಾಲಿಗೆ ಕಂಟಕವಾಗಿರುವ ಕಾರಣಗಳ ಮೇಲೆ ಹದ್ದುಗಣ್ಣಿಡುವುದು ಅದರ ಬೇಡಿಕೆಯಾಗಿದೆ. ಈಗಂತೂ ಅದಕ್ಕೆ ಈ ಕಾರಣಗಳನ್ನು ಸರಿಯಾಗಿ ಗುರುತಿಸಿಕೊಳ್ಳುವುದು ಬಹಳ ಸುಲಭವಾಗಿದೆ. ಏಕೆಂದರೆ ಈಗ ಅದರ ಮುಂದಿರುವುದು ಇತರ ಸಮುದಾಯಗಳ ಉತ್ಥಾನ-ಪತನಗಳ ಚರಿತ್ರೆ ಮತ್ತು ಕಾರಣಗಳು ಮಾತ್ರವಲ್ಲ, ಸ್ವಯಂ ತನ್ನ ಕತೆಯೂ ಇದೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಪತನದ ಕಾರಣಗಳನ್ನು ಅದು ಮೊದಲು ಇತರರಲ್ಲಿ ದೂರದಿಂದ ಕಾಣುತ್ತಿದ್ದುದು ಮತ್ತು ಕೇವಲ ಬಾಹ್ಯವಾಗಿ ಅನುಭವಿಸುತ್ತಿದ್ದುದು ಈಗ ಅದನ್ನು ಅತ್ಯಂತ ಸಮೀಪದಿಂದ ನೋಡುತ್ತಿದೆ. ಅವುಗಳ ಬಗ್ಗೆ ತನ್ನ ಸ್ವಯಂ ಅನುಭವವನ್ನು ಹೊಂದಿದೆ. ಆದ್ದರಿಂದ ಅದು ವಿಚಾರ ಮಂಥನ ಮತ್ತು ಕರ್ತವ್ಯ ಪ್ರಜ್ಞೆಯೊಂದಿಗೆ ತನ್ನ ಗತಕಾಲದ ಆಚಾರ-ವಿಚಾರಗಳ ಬಗ್ಗೆ ನಿಷ್ಪಕ್ಷವಾದ ಆತ್ಮಾವಲೋಕನ ನಡೆಸಿದರೆ ಅದನ್ನು ಮತ್ತು ಆಂದೋಲನವನ್ನು ಈಗಿನ ದುಸ್ಥಿತಿಗೆ ತಲುಪಿದ ಕಾರಣಗಳ ಪೈಕಿ ಒಂದೊಂದೂ ಅದರ ಮುಂದೆ ಬರುವುದು ಮತ್ತು ಅವುಗಳ ಹಿಡಿತದಿಂದ ಮುಕ್ತಿ ಹೊಂದದೆ ಅದಕ್ಕೆ ತನ್ನ ಕರ್ತವ್ಯವನ್ನು ಇನ್ನೊಮ್ಮೆ ಈಡೇರಿಸುವುದು ಸಾಧ್ಯವಿಲ್ಲ.

ಇನ್ನು, ಈ ಕರ್ತವ್ಯದ ಈಡೇರಿಕೆಗಾಗಿ ನಡೆಸುವ ಪುನರ್ ಪ್ರಯತ್ನವನ್ನು ಇದೇ ಪ್ರಥಮವೆಂದೂ ಹೇಳಲಾಗದು. ಸಮುದಾಯದ ಎಷ್ಟೋ ಸಜ್ಜನರು ಮತ್ತು ಅವರ ತಂಡಗಳು ಇಸ್ಲಾಮಿನ ಪುನರುತ್ಥಾನಕ್ಕಾಗಿ ಅನೇಕ ಕಾರ್ಯಾಚರಣೆಗಳನ್ನು ಬೇರೆ-ಬೇರೆ ಕಾಲಾವಧಿಯಲ್ಲಿ ನಡೆಸಿದ್ದಾರೆ. ಧರ್ಮದ ಪುನಃ ಸ್ಥಾಪನೆಗಾಗಿ

ಬೇರೆ ಬೇರೆ ಆಂದೋಲನಗಳು ಎದ್ದವು, ಹಾಗೆಯೇ ಬಿದ್ದು ಹೋದುವು. ಅವುಗಳ ಸಂಪೂರ್ಣ ವೃತ್ತಾಂತಗಳು ಚರಿತ್ರೆಯಲ್ಲಿ ಸುರಕ್ಷಿತವಾಗಿ ದಾಖಲಾಗಿವೆ. ಅದರ ಬೆಳಕಿನಲ್ಲಿ ಇಂದು ಆಂದೋಲನಕ್ಕೆ ತನ್ನ ಹೆಜ್ಜೆ ಗುರುತುಗಳನ್ನು ಸ್ಪಷ್ಟವಾಗಿ ಕಾಣಬಹುದು. ಏಕೆಂದರೆ ಇಂದು ಯಾವುದೇ ಧಾರ್ಮಿಕ ಆಂದೋಲನ ಕಾರ್ಯರಂಗಕ್ಕಿಳಿದರೂ ಅದು ಧರ್ಮಸಂಸ್ಥಾಪನೆಯ ಆಂದೋಲನವಾಗಲಾರದು. ಅದು ಧರ್ಮದ ಮರುಸ್ಥಾಪನೆಯ ಆಂದೋಲನವಾಗಿರುವುದು. ಸ್ವರೂಪದ ಈ ಏಕರೂಪತೆಯಿಂದಾಗಿ ಈ ಆಂದೋಲನಗಳ ಪೂರ್ಣ ಚರಿತ್ರೆಯ ಅಧ್ಯಯನ ಮತ್ತು ಅವಲೋಕನ ನಡೆಸುವುದು ಇಂದಿನ ಯಾವುದೇ ಇಸ್ಲಾಮೀ ಆಂದೋಲನದ ಮಟ್ಟಿಗೆ ಬಹಳ ಮುಖ್ಯವಾಗಿದೆ. ಈ ಅಧ್ಯಯನದಿಂದ ಅದಕ್ಕೆ ಕೆಲವು ಭವಿಷ್ಯದ ಮತ್ತು ರಚನಾತ್ಮಕ ಸ್ವರೂಪದ, ಆಂದೋಲನಗಳ ಇತಿಹಾಸದಲ್ಲಿ ಕಾಣಲು ಸಾಧ್ಯವಿಲ್ಲದಂತಹ, ಕೆಲವು ಅಂಶಗಳು ಲಭಿಸಬಹುದು.

ಒಟ್ಟಿನಲ್ಲಿ ಇಂದಿನ ಸಂದೇಶ ಪ್ರಚಾರಕರಿಗೆ ಅಗತ್ಯವಾಗಿ ಬೇಕಾಗಿರುವುದು ಕೇವಲ 'ಪಥ್ಯ' ಮತ್ತು 'ಜಾಗರೂಕತೆ'ಯ ದೃಢ ಸಂಕಲ್ಪವಾಗಿದೆ. ಅನ್ಯಥಾ 'ಚಿಕಿತ್ಸೆ'ಗಾಗಲಿ 'ಆರೋಗ್ಯ ರಕ್ಷಣೆ'ಗಾಗಲಿ ಇಲ್ಲಿ ಎಲ್ಲರಿಗೂ ಬೇಕಾದ ಅನುಭವ ಸಿದ್ಧ ಮಾರ್ಗೋಪಾಯಗಳಿವೆ. ಸತ್ಯ ಧರ್ಮದ ಸುದೀರ್ಘ ಚರಿತ್ರೆಯು ಎಲ್ಲ ರೀತಿಯ ಪ್ರಚಾರ ಅನುಭವಗಳು ಮತ್ತು ಪ್ರಚಾರ ಕತೆಗಳಿಂದ ತುಂಬಿಕೊಂಡಿದೆ. ಇತರ ಸಮುದಾಯಗಳ ಕತೆಗಳಷ್ಟೇ ಅಲ್ಲ, ಸ್ವಯಂ ಮುಸ್ಲಿಮ್ ಸಮುದಾಯದ್ದೂ ಕೂಡಾ. ರಚನಾತ್ಮಕ ಮತ್ತು ಶಾಶ್ವತ ಸ್ವರೂಪದ್ದು ಮಾತ್ರವಲ್ಲ, ಪುನರುತ್ಥಾನ ಚಳವಳಿಗಳದ್ದು ಕೂಡಾ. ಇಷ್ಟೆಲ್ಲ ಸ್ಪಷ್ಟ ಸಂಕೇತಗಳಿದ್ದೂ ಇಂದಾದರೂ ಒಂದು ಪ್ರಚಾರಕ ಗುಂಪಿಗೆ ಇದರ ಅಗತ್ಯ ಸ್ಪಷ್ಟವಾಗಿಲ್ಲವೆಂದಾದರೆ ಮತ್ತು ತನ್ನ ಧರ್ಮಾಹ್ವಾನ ಕರೆಯನ್ನು ಅಪಾಯಗಳಿಂದ ರಕ್ಷಿಸುವ ಚಿಂತೆಯು ಅದನ್ನು ಕಾಡದಿದ್ದರೆ, ಇದು ನಿಜವಾಗಿಯೂ ಅದರ ವೈಚಾರಿಕ ದಿವಾಳಿತನದ ಸ್ಪಷ್ಟ ಪುರಾವೆಯಾಗಿದೆ. ಇಂತಹ ಸ್ಥಿತಿಯಲ್ಲಿ ತನ್ನ ಪ್ರಚಾರಕ ಚಟುವಟಿಕೆಯು ಯಶಸ್ವಿಯಾಗಿ ಕಾಣಬೇಕೆಂದು ಹಂಬಲಿಸುವ ಹಕ್ಕು ಅದಕ್ಕಿರುವುದಿಲ್ಲ.

## ಇಸ್ಲಾಮೀ ಆಂದೋಲನವು ಆತ್ಮವಿಮರ್ಶೆ ಮಾಡಿಕೊಳ್ಳಬೇಕು:

## (ಜಮಾಅತೆ ಇಸ್ಲಾಮೀ)

ಲೋಕದ ಯಾವುದೇ ಆಂದೋಲನಗಳಿಗೆಂಬಂತೆ ಭಾರತದ ಇಸ್ಲಾಮೀ ಆಂದೋಲನಕ್ಕೂ ಒಂದು ಪ್ರಧಾನ ಎಚ್ಚರಿಕೆಯ ಅಗತ್ಯವಿದೆ. ಅಂದರೆ ಈ ಆಂದೋಲನವು ತನ್ನ ಪ್ರಯಾಣದಲ್ಲಿ ಮುಂದೆ ಸಾಗುತ್ತಿರುವಾಗ ಕೆಡುಕಿಗೆ, ಒಡಕಿಗೆ ಮತ್ತು ಪತನಕ್ಕೆ ಗುರಿಯಾಗುವ ಸಾಧ್ಯತೆಯ ಕುರಿತು ಎಚ್ಚರಿಕೆ ವಹಿಸಬೇಕಾಗುತ್ತದೆ. ಈ ವಿಷಯಗಳು ಹಿಂದಿನ ಎಷ್ಟೋ ಆಂದೋಲನಗಳನ್ನು ಗುರಿ ಮುಟ್ಟುವುದಕ್ಕಿಂತ ಮುಂಚೆಯೇ ಮುಗಿಸಿ ಬಿಟ್ಟಿವೆ. ಎಷ್ಟೋ ಆಂದೋಲನಗಳನ್ನು ಗುರಿ ಮುಟ್ಟಿದ ಬಳಿಕ ದಾರಿ ತಪ್ಪಿಸಿವೆ. ಆದರಿಂದ ಮುಖ್ಯವಾಗಿ ಪಾಠ ಕಲಿಯಬೇಕಾಗಿದೆ. ಈ ಆಂದೋಲನವು ಸಮುದಾಯದ ವಿವಿಧ ವಿಭಾಗಗಳ ಆಚಾರ-ವಿಚಾರಗಳನ್ನು ಚೆನ್ನಾಗಿ ಅಭ್ಯಸಿಸಿ, ಅವುಗಳಲ್ಲಿರುವ ನ್ಯೂನತೆಗಳನ್ನು ಗುರುತಿಸಿದೆ. ಅದನ್ನು ಯಾವುದೇ ಮುಚ್ಚು ಮರೆಯಿಲ್ಲದೆ ಅನಾವರಣಗೊಳಿಸಿದೆ. ಅದರಲ್ಲಿ ಯಾವುದೇ ಸಂಕೋಚ ಮಾಡಲಿಲ್ಲ. ವಿಶೇಷವಾಗಿ ಅವರ ಆಚಾರ-ವಿಚಾರಗಳ ನ್ಯೂನತೆಗಳನ್ನು ವಿವರಿಸುವಾಗ, ಸಮುದಾಯವನ್ನು ಅದರ ನೈಜ ಸ್ಥಾನ ಮತ್ತು ಕರ್ತವ್ಯದಿಂದ ದೂರ ಎಸೆಯುವಲ್ಲಿ ಪ್ರಧಾನ ಪಾತ್ರ ವಹಿಸಿದ್ದ 'ಭಟ್ಟಂಗಿತನ'ಕ್ಕಿಳಿಯದೆ ಕಠೋರವಾಗಿ ವಿಮರ್ಶಿಸಬೇಕಾಯಿತು. ಏಕೆಂದರೆ ಕರ್ತವ್ಯದ ನಿರ್ವಹಣೆ ಮತ್ತು ಧಾರ್ಮಿಕ ಔಚಿತ್ಯವನ್ನು ಪರಿಗಣಿಸಿ ಹಾಗೆ ಮಾಡುವುದು ಅದಕ್ಕೆ ಅನಿವಾರ್ಯವಾಗಿತ್ತು. ಆದರೆ ಟೀಕೆ ಮತ್ತು ವಿಮರ್ಶೆಯ ಕರ್ತವ್ಯ ಅಲ್ಲಿಗೇ ಮುಗಿಯುವುದಿಲ್ಲ. ಅವುಗಳ ಹೊರತೂ ಇನ್ನಷ್ಟನ್ನು ಅದು ಬಯಸುತ್ತದೆ. ಈ 'ಇನ್ನಷ್ಟು' ಎಂಬುದೇ ವಾಸ್ತವದಲ್ಲಿ ನೈಜ ಟೀಕೆ ಮತ್ತು ವಿಮರ್ಶೆಯಾಗಿದೆಯೆಂದು ತಿಳಿದಿರಬೇಕು.

ಇಲ್ಲಿ ತನ್ನನ್ನು ತಾನೇ ಟೀಕಿಸುವುದು ಉದ್ದೇಶಿತವಾಗಿದೆ. ತನ್ನ ಆಚಾರ-ವಿಚಾರಗಳ ಮೇಲೆ ಸೂಕ್ಷ್ಮ ದೃಷ್ಟಿ ಬೀರುವುದೇ ಸರಿಯಾದ ವಿಮರ್ಶೆಯಾಗಿದೆ. ಇತರರ ಆಚಾರ-ವಿಚಾರಗಳ ವಿಮರ್ಶಾತ್ಮಕ ಅವಲೋಕನ ನಡೆಸುವ ಅಗತ್ಯ ಎಂದಾದರೊಮ್ಮೆ ಬರುತ್ತದೆ. ಆದರೆ ತನ್ನ ಮೇಲೆ ವಿಮರ್ಶಾತ್ಮಕ ದೃಷ್ಟಿ ಹರಿಸುವ ಅಗತ್ಯ ಯಾವಾಗಲೂ ಇರುತ್ತದೆ. ಅದಕ್ಕಾಗಿ ತನ್ನ ಕಣ್ಣುಗಳನ್ನು

ತೆರೆದಿಟ್ಟು ಕಣ್ಣಾಗಲಿಟ್ಟು, ಅನೇಕ ಧಾರ್ಮಿಕ ಆಂದೋಲನಗಳನ್ನು ಮರಣಕೂಪಕ್ಕೆ ತಳ್ಳಿದಂತಹ- ಸತ್ಯಸಂದೇಶವನ್ನು ಬುಡದಿಂದಲೇ ಕಿತ್ತೆಸೆಯುವಂತಹ- ಕಾರಣಗಳು ನಮ್ಮೊಳಗೆಯೇ ನುಸುಳಲು ಹವಣಿಸುತ್ತಿದೆಯೇ ಎಂದು ನೋಡುತ್ತಿರಬೇಕಾಗುತ್ತದೆ. ಈ ಆತ್ಮ ವಿಮರ್ಶೆಯ ಅಭ್ಯಾಸ ಮಾಡದೆ ಇದ್ದರೆ, ಆಂದೋಲನದ ಈ ವಕ್ತಾರರು ತಮ್ಮನ್ನು ವಿಮರ್ಶಾತೀತರು, ತಮ್ಮ ಮಟ್ಟಿಗೆ ಇತರರ ಅಗತ್ಯವಿಲ್ಲವೆಂದು ಭಾವಿಸಿ ಬಿಟ್ಟರೆ ಹಾಗೂ ತಮ್ಮ ನಿರ್ಲಕ್ಷ್ಯ ಅಥವಾ ಅನಾಸ್ಥೆಯಿಂದಾಗಿ ಈ ಕಾರಣಗಳ ಮಾರಕತೆಯ ಬಗ್ಗೆ ನಿಶ್ಚಿಂತರಾದರೆ, ಅವರೂ ಸಮುದಾಯದ ಇತಿಹಾಸವನ್ನು ಮರುಕಳಿಸಿ ತರುವ ದಿನ ದೂರವಿರಲಾರದು. ಈ ಸಮುದಾಯವು ಬಹುಕಾಲದಿಂದ ಅಲ್ಲಾಹನ ಗ್ರಂಥವನ್ನು ಪಠಿಸುತ್ತಾ, ಯಹೂದಿ-ಕ್ರೈಸ್ತರು ಮತ್ತಿತರ ಪಥಭ್ರಷ್ಟ ಜನಾಂಗಗಳನ್ನು ನಿರಂತರ ಶಪಿಸುತ್ತಾ, ಅವರ ಆಚಾರ-ವಿಚಾರಗಳನ್ನು ಟೀಕಿಸುತ್ತಾ ಇದ್ದರೂ ತನ್ನ ಸ್ಥಿತಿಯೂ ಅವರಿಗಿಂತ ಭಿನ್ನವಾಗಿಲ್ಲ, ತಾನೂ ಅವರು ಮುಳುಗಿದ್ದಂತಹ ಕೆಡುಕು ಮತ್ತು ಪಾಪಗಳಲ್ಲಿ ಮುಳುಗಿ ಹೋಗಿದ್ದೇನೆಂಬುದನ್ನು ಸ್ವಲ್ಪವೂ ಗಮನಿಸುವುದಿಲ್ಲ. ಇಂದು ಈ ಕರ್ತವ್ಯ ನಿರ್ವಹಣೆಯಲ್ಲಿ ತೊಡಗಿರುವ ಮಂದಿ-ಅದಕ್ಕಾಗಿಯೇ ಈ ಸಮುದಾಯವನ್ನು ಎಬ್ಬಿಸಲಾಗಿತ್ತು- ''ದುಷ್ಕರ್ಮಗಳೆಲ್ಲ ನಮಗೆ, ಉಪದೇಶ ಇತರರಿಗೆ'' ಎಂಬ ನಿರ್ಲಜ್ಜ ನೀತಿಯನ್ನು ತೊರೆಯಬೇಕಾದುದು ಅತಿ ಅಗತ್ಯವಾಗಿದೆ. ಅನ್ಯಥಾ ಅವರು ಇತರರ ನಿರ್ಲಕ್ಷ್ಯ ಮತ್ತು ನ್ಯೂನತೆಗಳನ್ನು ದೂಷಿಸುತ್ತಾ ಇರುವರು. ಅತ್ತ ಇದೇ ನ್ಯೂನತೆಗಳು ಅವರ ವಿಶ್ವಾಸ ಮತ್ತು ಕರ್ಮಬಲವನ್ನು ಗೆದ್ದಲಿನಂತೆ ಕೊರೆಯುತ್ತಿರುವುದು. ಇಂತಹ ದುರಂತ ಬಾರದಿರಲಿ. ಆದರೆ ಪದೇ ಪದೇ ಅಸ್ತಿತ್ವಕ್ಕೆ ಬರುವ ವಿಷಯದ ಪುನರಾವರ್ತನೆಯು ಈಗ ಅಸಂಭವನೀಯವೋ ಅನಿರೀಕ್ಷಿತವೋ ಅಲ್ಲ, ಆದ್ದರಿಂದ ಅದನ್ನು ಅತ್ಯಪಾಯಕಾರಿ ಸಂಭವವೆಂದು ಪರಿಗಣಿಸಿ, ಅದು ಬರುವುದಕ್ಕೆ ಮುಂಚೆ, ಪ್ರಥಮ ನಿಮಿಷದಿಂದಲೇ ಅದನ್ನು ತಡೆಗಟ್ಟುವ ಚಿಂತೆಯಲ್ಲಿರಬೇಕಾದುದು ಅಗತ್ಯ. ಅಂದರೆ ಸತ್ಯಸಂದೇಶದ ಶತ್ರುಶಕ್ತಿಗಳ ಕಾರ್ಯಾಚರಣೆಯನ್ನು ಕಾಯದೆಯೇ ಅವುಗಳ ವಿರುದ್ಧ ಸಿದ್ಧತೆಗಳನ್ನು ಮೊದಲೇ ಪೂರ್ಣಗೊಳಿಸಿಕೊಳ್ಳಬೇಕು ಮತ್ತು ಸ್ವಲ್ಪವೂ ಬಿರುಕು ಉಳಿದಿರದಂತೆ ಗಡಿಗಳ 'ನಾಕಬಂದಿ' ಮಾಡಬೇಕು.

## ಆತ್ಮ ವಿಮರ್ಶೆಯ ಮೂಲಭೂತ ಮಾರ್ಗೋಪಾಯ

ಈ ಚಿಂತೆ, ಪೂರ್ವಸಿದ್ಧತೆ ಮತ್ತು ದೂರದೃಷ್ಟಿಯ ಹಕ್ಕು ಸತ್ಯಸಂದೇಶ ಪ್ರಚಾರದ ಆರಂಭ ಘಟ್ಟದಲ್ಲಿ, ಜಮಾಅತ್‌ನ ಪ್ರತಿಯೊಬ್ಬ ವ್ಯಕ್ತಿಯೂ, ಅವನ ಸ್ಥಾನ ಯಾವುದೇ ಇರಲಿ ಮತ್ತವನ ಪ್ರತಿಭೆ ಏನೇ ಇರಲಿ, ಇದನ್ನು ತನ್ನ ಸರ್ವ ಪ್ರಥಮ ಕರ್ತವ್ಯವಾಗಿ ಮಾಡದೆ ಪೂರ್ಣಗೊಳ್ಳಲಾರದು. ಈ ವಿಷಯದಲ್ಲಿ ಜಮಾಅತ್‌ನ ಎಲ್ಲರೂ ಸಮಾನ ಹೊಣೆಗಾರರಲ್ಲವೆಂಬುದು ಸರಿ. ಆದರೆ ಹೊಣೆಗಾರಿಕೆಯಲ್ಲಿ ಎಲ್ಲರೂ ಪಾಲುದಾರರಾಗಿದ್ದಾರೆಂದರೂ ತಪ್ಪಲ್ಲ. ಹುದ್ದೆ ಮತ್ತು ಜ್ಞಾನದ ದೃಷ್ಟಿಯಿಂದ ಈ ಹೊಣೆಗಾರಿಕೆಯು ವಿಸ್ತೃತವಾಗುತ್ತದೆ. ಸಂಬಂಧಿತ ವ್ಯಕ್ತಿಗಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಅದೇ ರೀತಿ ಯಾರಲ್ಲಾದರೂ ಸಾಮಾನ್ಯ ಗ್ರಹಿಕೆಯ ಸಾಮರ್ಥ್ಯವಿದ್ದರೆ ಅದು ಅವನ ಹೊಣೆಗಾರಿಕೆಯನ್ನು ಸೀಮಿತ ಗೊಳಿಸುತ್ತದೆ. ಸಂಪೂರ್ಣ ಇಲ್ಲದಂತೆ ಮಾಡುವುದಿಲ್ಲ. ಆದರೆ ಜಮಾಅತ್‌ನ ಯಾವನೇ ವ್ಯಕ್ತಿಯು, ಜಮಾಅತನ್ನು ಆಚಾರ-ವಿಚಾರಗಳ ಕೆಡುಕಿನಿಂದ ರಕ್ಷಿಸುವುದು ಪದಾಧಿಕಾರಿಗಳ ಮತ್ತು 'ದೊಡ್ಡ' ಜನರ ಕಾರ್ಯವೇ ಹೊರತು ನಮ್ಮಂತಹ, ಸಾಮಾನ್ಯ ಕಾರ್ಯಕರ್ತರದ್ದಲ್ಲವೆಂದು ಭಾವಿಸಿದರೆ ಅದೊಂದು ಅಪಾಯಕಾರಿ ಭಾವನೆಯಾಗಿರುವುದು. ಇಂತಹ ಭಾವನೆಯೊಂದಿಗೆ ಯಾರಿಗೂ ಇಕಾಮ ತುದ್ದೀನ್‌ನ (ಧರ್ಮಸಂಸ್ಥಾಪನೆಯ) ಕರ್ತವ್ಯದಲ್ಲಿ ಆರೋಗ್ಯಕರ ಪಾತ್ರ ವಹಿಸಲು ಸಾಧ್ಯವಿಲ್ಲ. ಈ ತಪ್ಪುಕಲ್ಪನೆಯು ಸಾರ್ವತ್ರಿಕವಾದರೆ, ಅದು ಆಂದೋಲನಕ್ಕೆ ಜೀವನ್ಮರಣದ ಸಮಸ್ಯೆಯಾಗುವ ಕಾಲ ದೂರವಿಲ್ಲ.

ಈ ಚಿಂತೆ, ಪೂರ್ವ ಸಿದ್ಧತೆ ಮತ್ತು ಚಾಣಾಕ್ಷ ಪ್ರಯತ್ನವು ಕುರ್‌ಆನ್ ಮತ್ತು ಹದೀಸ್‌ಗಳಲ್ಲಿರುವ ಸಂಬಂಧಿತ ಆದೇಶಗಳ ಹಾಗೂ ಹಿಂದಿನ ದೀನೀ(ಧಾರ್ಮಿಕ) ಆಂದೋಲನಗಳ ಮತ್ತು ಇಸ್ಲಾಮೀ ಆಂದೋಲನದ ಇತಿಹಾಸವನ್ನು ಆಳವಾಗಿ ಅಧ್ಯಯನ ನಡೆಸುವುದರಿಂದ ಯಶಸ್ಸು ಪಡೆಯಬಹುದು. ಈ ಅಧ್ಯಯನದ ಬೆಳಕಿನಲ್ಲಿ ಸತ್ಯಸಂದೇಶ ಪ್ರಚಾರಕ ಆಂದೋಲನಗಳ ದೋಷಗಳು ಹಾಗೂ ಅಧಃಪತನಗಳಿಗೆ ಚಿಕಿತ್ಸೆ ನೀಡುವುದಕ್ಕಷ್ಟೇ ಸೀಮಿತಗೊಳಿಸಬಾರದು, ಅದನ್ನು ಒಬ್ಬ ನುರಿತ ಸಂಶೋಧಕನ (Research Scholar) ರೀತಿಯಲ್ಲಿ ಮಾಡಬೇಕು. ಅಷ್ಟೇ

ಅಲ್ಲ, ಅದೇ ಎಚ್ಚರಿಕೆ ಮತ್ತು ಪಾಠಗಳ ಒಂದು ಪಟ್ಟಿ ತಯಾರಿಸಿ, ಸಂದೇಶ ಪ್ರಚಾರಕನ ಕರ್ತವ್ಯ ಪ್ರಜ್ಞೆಯ ಬೇಡಿಕೆಯಾಗಿರುವ ಒಂದು ದರ್ಪಣವನ್ನು ತನ್ನ ಮುಂದಿಡಬೇಕು. ಈ ದರ್ಪಣದಲ್ಲಿ ಎಂದಾದರೂ ವೈಚಾರಿಕ ಅಥವಾ ಕ್ರಿಯಾತ್ಮಕವಾದ ವಕ್ರತೆ ಕಂಡು ಬಂದಲ್ಲಿ ಅದನ್ನು ಸರಿಪಡಿಸಲು ಒಂದು ಕ್ಷಣವನ್ನೂ ವ್ಯರ್ಥಗೊಳಿಸಬಾರದು. ಅದರಲ್ಲಿ ವಿಳಂಬ, ಸಮರ್ಥನೆ ಮತ್ತು ನಿರ್ಲಕ್ಷ್ಯ ಕೂಡಾ ಸಲ್ಲದು.

ಆದರೆ ಗಾಜಿನ ದರ್ಪಣದಲ್ಲಿ ನಮ್ಮ ಬಾಹ್ಯ ಶರೀರ ವಿನ್ಯಾಸವನ್ನು ನೋಡುವುದು ಎಷ್ಟು ಸುಲಭವೋ ಅಕ್ಷರ-ತಾತ್ಪರ್ಯಗಳ ಈ ದರ್ಪಣದಲ್ಲಿ ನಮ್ಮ ಆಂತರ್ಯವನ್ನು ನೋಡುವುದು ಅಷ್ಟು ಸುಲಭವಲ್ಲ. ಅದು ಅತ್ಯಂತ ಕಠಿಣವಾಗಿದೆ. ಈ ಕಠಿಣ ಕಾರ್ಯವನ್ನು ಎರಡು ವಿಷಯಗಳನ್ನು ಪಾಲಿಸದೆ ನಿಯಂತ್ರಿಸಲು ಸಾಧ್ಯವಿಲ್ಲ.

1) ಚಿತ್ತಾಕಾಂಕ್ಷೆಗಳನ್ನು ಪೂರ್ಣವಾಗಿ ಹತೋಟಿಯಲ್ಲಿಡಬೇಕು. ಅದು ತನ್ನನ್ನು ತಪ್ಪುಗಳಿಂದಲೂ, ಪ್ರಮಾದಗಳಿಂದಲೂ ಮುಕ್ತವೆಂದು ಬಿಂಬಿಸುವಲ್ಲಿ ಬಹಳ ಚುರುಕಾಗಿದೆ. ಅದು ದೊಡ್ಡ ಚಾಣಾಕ್ಷವಾಗಿದೆ. ಅದರ ಬಳಿ ವಂಚನಾತ್ಮಕ ಸಮರ್ಥನೆಗಳನ್ನು ಸೃಷ್ಟಿಸಲು ಬೇಕಾದ ಅತಿ ವೇಗದ ಯಂತ್ರಗಳಿವೆ. ಅವಲೋಕನ ಮತ್ತು ವಿಮರ್ಶೆಯಲ್ಲಿ ಯಾವುದಾದರೂ ತಪ್ಪನ್ನು ಎತ್ತಿ ತೋರಿಸಿದರೆ ನವನವೀನ ಸುಂದರ ಪರದೆಯನ್ನು ಅದರ ಮೇಲೆ ಹಾಕಲು ಅದು ಹವಣಿಸುತ್ತದೆ. ದುರ್ಬಲ ಮನಸ್ಕನಾಗಿರುವ ಮನುಷ್ಯನು, ನಾನೇನೂ ತಪ್ಪು ಮಾಡಿಲ್ಲ, ನಾನು ಮಾಡಿದಂತಹ ಕೃತ್ಯವು ತಪ್ಪೋ, ದೋಷವೋ ಅಲ್ಲ, ಇಂತಿಂತಹ ಕಾರಣಗಳಿಂದಾಗಿ ಅದು ಸರಿಯೇ ಆಗಿದೆ. ಚಿತ್ತಾಕಾಂಕ್ಷೆಯ ಈ ವಂಚನೆಯ ಬಗ್ಗೆ ಜಾಗರೂಕತೆ ವಹಿಸಬೇಕಾದುದು ಯಶಸ್ವಿ ಆತ್ಮ ವಿಮರ್ಶೆಗೆ ಅಗತ್ಯದ ಪ್ರಥಮ ಶರ್ತವಾಗಿದೆ.

2) ಆಚಾರ-ವಿಚಾರಗಳ ಕುಂದುಕೊರತೆಗಳ ಬಗ್ಗೆ ಒಂದು ಪ್ರಮುಖ ಅಂಶವನ್ನು ಎಂದಿಗೂ ಮರೆಯಬಾರದು. ಈ ದೌರ್ಬಲ್ಯಗಳು ಕೆಲವೊಮ್ಮೆ ಹೃದಯಗಳನ್ನೇ ಬದಲಿಸಬಲ್ಲವು. ಆದ್ದರಿಂದ ಗತಕಾಲದ ಆಂದೋಲನಗಳು ಮತ್ತು ಸಂಘಟನೆಗಳಲ್ಲಿ ಕಂಡು ಬಂದಿದ್ದ ದೌರ್ಬಲ್ಯಗಳು ಅದೇ ರೂಪದಲ್ಲಿ ಇಂದೂ ಕಾಣಸಬೇಕೆಂದಿಲ್ಲ. ಶೈತಾನನು ತನ್ನ 'ಮಾರ್ಗದರ್ಶನ' ಮತ್ತು

ಪ್ರೇರಣೆಗಳನ್ನು ಯಾವಾಗಲೂ ಒಂದೇ ರೀತಿ ಎಲ್ಲರ ಮುಂದಿಡುವುದಿಲ್ಲ. ಇದು ಅವನ ಯಶಸ್ವಿ ಹಾಗೂ ಪ್ರಸಿದ್ಧ ಕಾರ್ಯತಂತ್ರವಾಗಿದೆ. ಅವನು ಹೊಸ ಹೊಸ ರೂಪದಿಂದ ಕೆಲಸ ಮಾಡುತ್ತಾನೆ. ಮಾನವ ಸುಲಭದಲ್ಲಿ ಎರೆಯಾಗಲೆಂದು ಅವನು ಸಂದರ್ಭ ಮತ್ತು ಅವನ ದುರ್ಬಲ ಅಂಶಗಳನ್ನು ಪರಿಗಣಿಸುತ್ತಾನೆ. ಇದರ ಪರಿಣಾಮವಾಗಿ ಮನುಷ್ಯನು ತಾನು ದ್ವೇಷಿಸುವ ಮತ್ತು ತಿರಸ್ಕಾರ ಭಾವದಿಂದ ನೋಡುವ ವಸ್ತುಗಳನ್ನೇ ಕೆಲವೊಮ್ಮೆ ಹೊಸ ರೂಪ ಮತ್ತು ಹೊಸ ವೇಷದಲ್ಲಿ ಕಂಡು ಅಪ್ಪಿ ಹಿಡಿಯುತ್ತಾನೆ. ಸಕ್ಕರೆಯ ಹೊರಾವರಣದ ಒಂದಲ್ಲ, ಅನೇಕ ಮಾತ್ರೆಗಳನ್ನು ಸಿದ್ಧೌಷಧವೆಂದು ಭಾವಿಸಿ ನುಂಗಿಕೊಳ್ಳುತ್ತಾನೆ. ಚಿತ್ತದ ಮತ್ತು ಶೈತಾನನ ಈ ವಂಚನೆಯ ಕುರಿತು ಜಾಗೃತರಾಗಿರಬೇಕಾದುದು ಎರಡನೆಯ ಅಗತ್ಯ ಶರ್ತವಾಗಿದೆ.

ಈ ಎರಡೂ ಶರ್ತಗಳನ್ನು ಪೂರ್ತಿಗೊಳಿಸಿದ ಬಳಿಕವೇ ಜನರು ಸರಿಯಾಗಿ ತಮ್ಮ ಆತ್ಮ ವಿಮರ್ಶೆ ಮಾಡಿಕೊಳ್ಳಬಹುದು ಮತ್ತು ಆಚಾರ-ವಿಚಾರಗಳ ಸರಿಯಾದ ಚಿತ್ರಣ ನೋಡಬಹುದೆಂದು ನಿರೀಕ್ಷಿಸಬಹುದು.

## ಇಸ್ಲಾಮೀ ಆಂದೋಲನಗಳಿಗೆ ಅತಿ ಪ್ರಧಾನ ಅಪಾಯಗಳು

ಒಂದು ಇಸ್ಲಾಮೀ ಆಂದೋಲನದ ಪತನ ಮತ್ತು ಸೋಲಿನ ಪ್ರಮುಖ ಕಾರಣಗಳನ್ನು ಅರಿಯೋಣ. ಸೋಲಿಗೆ ಕಾರಣವಾಗಬಲ್ಲ ಎಲ್ಲವನ್ನೂ ಪಟ್ಟಿ ಮಾಡಲು ಸಾಧ್ಯವಿಲ್ಲ. ಏಕೆಂದರೆ ಅವು ನಿರ್ದಿಷ್ಟವೋ ಸೀಮಿತವೋ ಅಲ್ಲ. ಅದು ವಿವಿಧ ಆಂದೋಲನಗಳ ಆಂತರಿಕ ಮತ್ತು ಬಾಹ್ಯ ಸ್ಥಿತಿಗತಿಗಳಿಗನುಸಾರ ವಿಭಿನ್ನ ರೀತಿಯಲ್ಲಿರಬಹುದು. ಆದ್ದರಿಂದ ಇಲ್ಲಿನಾವು ಕೆಲವು ಮೂಲ ಕಾರಣಗಳನ್ನು ಮಾತ್ರ ಸೂಚಿಸುತ್ತೇವೆ. ಅವುಗಳ ಅಪಾಯಗಳ ಬಗ್ಗೆ ಎಲ್ಲ ಇಸ್ಲಾಮೀ ಆಂದೋಲನಗಳೂ ಸದಾ ಜಾಗೃತವಾಗಿರುವುದು ಅಗತ್ಯ.

### 1) ಪ್ರಾಮಾಣಿಕತೆಯ ಕೊರತೆ

ಒಂದು ಇಸ್ಲಾಮೀ ಆಂದೋಲನದ ಪತನಕ್ಕೆ ಅದರ ಕಾರ್ಯಕರ್ತರಲ್ಲಿ ಪ್ರಾಮಾಣಿಕತೆ ಮತ್ತು ದೇವನಿಗಾಗಿ ಸಮರ್ಪಣಾಭಾವದ ಕೊರತೆಯೇ ಮೂಲ ಕಾರಣವಾಗಿರುತ್ತದೆ. ಈ ರೋಗವು ಉಲ್ಬಣಗೊಂಡಂತೆ ಆಂದೋಲನವು ಮರಣಕ್ಕೆ

ಹತ್ತಿರವಾಗುತ್ತಾ ಹೋಗುತ್ತದೆ. ಪತನಕ್ಕೆ ಇದೊಂದೇ ಕಾರಣವೆನ್ನುವಂತಿಲ್ಲ, ಇದು ಅನೇಕ ಕಾರಣಗಳ ಪೈಕಿ ಒಂದಾಗಿದೆ. ಆದರೆ ಇತರೆಲ್ಲ ಕಾರಣಗಳಿಂದ ಮೂಲಭೂತವಾಗಿ ಭಿನ್ನವಾಗಿರುವ ಎರಡು ವಿಷಯಗಳು ಪ್ರಮುಖವಾಗಿವೆ. ಒಂದನೆಯದಾಗಿ, ಇದೊಂದು ಅತ್ಯಂತ ಮಾರಕ ರೋಗವಾಗಿದೆ. ಇದು ತೀವ್ರವಾಗಿ ಆಕ್ರಮಣ ನಡೆಸಿದರೆ ಯಾವ ಉಪಾಯದಿಂದಲೂ ಅದರ ಮಾರಕ ಪ್ರಭಾವವನ್ನು ನೀಗಿಸಲು ಸಾಧ್ಯವಿಲ್ಲ. ಪತನದ ಇತರ ಕಾರಣಗಳು ಅಷ್ಟು ಅಪಾಯಕಾರಿಯಾಗಿರುವುದಿಲ್ಲ. ಅವುಗಳ ಚಟುವಟಿಕೆ ಮತ್ತು ಪ್ರಭಾವದ ತೀವ್ರತೆಯನ್ನು ಬೇರೆ ಬೇರೆ ಉಪಾಯಗಳಿಂದ ಮಂದ ಗೊಳಿಸಬಹುದು. ಎರಡನೆಯದಾಗಿ, ಆ ಇತರ ಕಾರಣಗಳ ಪೈಕಿ ಕೆಲವು ಅದೇ 'ಮೂಲ ಕಾರಣ'ದೊಂದಿಗೆ ಸಂಬಂಧ ಹೊಂದಿವೆ. ನಿಜವಾಗಿ ಅವು ಅದೇ ರೋಗಗಳ ಮಾತೆಯ ಮೊಟ್ಟೆ ಮರಿಗಳಾಗಿವೆ. ಉಳಿದವು ಬೇರೆಯೇ ಕೆಲವು ಮಾನಸಿಕ ಮತ್ತು ಬೌದ್ಧಿಕ ನ್ಯೂನತೆಗಳಿಂದ ಹುಟ್ಟುತ್ತವಾದರೂ ಅದಕ್ಕೆ ಪ್ರಾಮಾಣಿಕತೆಯ ಕೊರತೆಯೇ ಮೂಲ ಕಾರಣವಾಗಿದೆ. ಸಾಮಾನ್ಯವಾಗಿ ಅವುಗಳಿಗೆ ಬೆಳೆಯಲು ಒಂದು ಅನುಕೂಲ ವಾತಾವರಣವನ್ನು ಸೃಷ್ಟಿಸುತ್ತದೆ ಮತ್ತು ಆಂದೋಲನಕ್ಕೆ ಬಲವಾದ ಪೆಟ್ಟು ನೀಡಲು ಅರ್ಹಗೊಳಿಸುತ್ತದೆ. ಈ ಎರಡು ಕಾರಣಗಳೇ ಆಂದೋಲನದ ಪತನದಲ್ಲಿ ಅತಿ ಪ್ರಮುಖ ಮತ್ತು ಮೂಲಭೂತ ಪಾತ್ರ ವಹಿಸುತ್ತದೆ. ಆದ್ದರಿಂದ ಅದರ ವಾಸ್ತವಿಕತೆ, ಅದರ ಚಟುವಟಿಕೆಗಳು ಮತ್ತು ಅದರ ಪ್ರಭಾವ ವಲಯಗಳ ಕುರಿತು ವಿಸ್ತೃತ ಚರ್ಚೆ ನಡೆಸಬೇಕಾಗಿದೆ.

ನಾವು ಪ್ರಾಮಾಣಿಕತೆ ಮತ್ತು ದೇವನಿಗಾಗಿ ಸಮರ್ಪಣಾ ಭಾವ (ಇಖ್ಲಾಸ್ ಮತ್ತು ಲಿಲ್ಲಾಹಿಯತ್) ಎಂಬೆರಡು ಪದಗಳನ್ನು ಇಲ್ಲಿ ಬಳಸಿದ್ದೇವೆ. ಇಖ್ಲಾಸ್ ಎಂದರೆ ಆಂದೋಲನದ ಉದ್ದೇಶದಲ್ಲಿ ಸಂಪೂರ್ಣ ಮನಃಸಂತೃಪ್ತಿ ಹೊಂದಿರು ವುದು. ಅದಕ್ಕಾಗಿ ಪರಿಶ್ರಮಿಸಲು ಮನಸ್ಸು ಏಕಾಗ್ರತೆಯನ್ನು ಹೊಂದಿರುವುದು. ಲೋಕದ ಬೇರಾವ ಕಾರ್ಯವೂ ಅದರಲ್ಲಿ ಸೇರದಿರುವುದು, ಮಾತ್ರವಲ್ಲ ಅದರ ಯೋಚನೆಯನ್ನು ಮಾಡದಿರುವುದು. ತನ್ನೆಲ್ಲ ಪರಿಶ್ರಮಗಳು ಅದಕ್ಕಾಗಿ ಮಾತ್ರ ಮೀಸಲಿರುವುದು. ತಲೆಯಲ್ಲಿ ಅದೇ ಚಿಂತೆಯಿರುವುದು. ಚಲನವಲನ ಮತ್ತು

ಕೆಲಸ ಕಾರ್ಯಗಳು ಸಂಪೂರ್ಣವಾಗಿ ಅದರ ನಿಯಂತ್ರಣದಲ್ಲಿರುವುದು, ಇತರ ಯಾವುದಾದರೊಂದಿಗೆ ಅದರ ಸಂಬಂಧವು ಇರುವುದಾದರೂ ಈ ಆಂದೋಲನವು ಅದಕ್ಕೆ ಅನುವು ಮಾಡಿ ಕೊಟ್ಟಾಗ ಅಥವಾ ಹೆಚ್ಚೆಂದರೆ ಅದಕ್ಕೆ ಅನುಮತಿ ಕೊಟ್ಟಾಗ ಮಾತ್ರ ಇರುವುದು.

ಲಿಲ್ಲಾಹಿಯತ್ ಎಂದರೆ ಆಂದೋಲನದ ಉದ್ದೇಶದೊಂದಿಗೆ ಈ ಸಂಬಂಧ ಮತ್ತು ಅದರಲ್ಲಿ ಪ್ರಾಮಾಣಿಕತೆಯು ಕೇವಲ ಅಲ್ಲಾಹನಿಗೆ ಮತ್ತು ಅವನ ಸಂಪ್ರೀತಿಗಾಗಿರಬೇಕು. ಅವನ ಸಂಪ್ರೀತಿಯಲ್ಲದೆ ಇನ್ನಾರ ಸಂಪ್ರೀತಿಯೂ ಹೃದಯವನ್ನು ಪ್ರವೇಶಿಸಬಾರದು. ಈ ನೈಜ ಉದ್ದೇಶ ಮತ್ತು ಉನ್ನತ ಹಿತಾಸಕ್ತಿಯಲ್ಲದೆ ಬೇರಾವ ಉದ್ದೇಶ ಮತ್ತು ಹಿತಾಸಕ್ತಿಯು ದೃಷ್ಟಿಯನ್ನು ತನ್ನತ್ತ ಸೆಳೆಯುವಂತಾಗಬಾರದು. ಆಂದೋಲನದ ಉದ್ದೇಶದೊಂದಿಗೆ ಸಂಬಂಧಕ್ಕೆ ತಾನು ತನ್ನ ಕುಟುಂಬ, ಜನಾಂಗ, ಸಮುದಾಯ, ತನ್ನ ಪಕ್ಷ ಮತ್ತು ಸಂಘಟನೆ ಹಾಗೂ ತನ್ನ ದೇಶ, ಮಾನವ ಕುಲ ಹಾಗೂ ಸಕಲ ಲೋಕವೇ ಆಗಿರಲಿ ಈ ಪೈಕಿ ಯಾವ ಹಿತ ಮತ್ತು ಸಂಪ್ರೀತಿಯೂ ನೈಜ ಪ್ರೇರಕವಾಗ ತಕ್ಕದ್ದಲ್ಲ, ಅದು ಕೇವಲ ಅಲ್ಲಾಹನ ಸಂಪ್ರೀತಿ ಮತ್ತು ಪರಲೋಕ ವಿಜಯ ಮಾತ್ರವಾಗಿರಬೇಕು.

ಒಂದು ಆಂದೋಲನವನ್ನು ಇಸ್ಲಾಮೀ ಆಂದೋಲನವಾಗಿ ಮಾರ್ಪಡಿಸುವುದು ಮತ್ತು ಇತರ ಆಂದೋಲನಗಳಿಂದ ಅದನ್ನು ಬೇರ್ಪಡಿಸುವುದು ಈ ಲಿಲ್ಲಾಹಿಯ್ಯತ್ ಮಾತ್ರ. ಸಾಮಾನ್ಯ ಪ್ರಾಮಾಣಿಕತೆಯು ಇಸ್ಲಾಮೀ ಆಂದೋಲನಕ್ಕೆಂಬಂತೆ ಇತರ ಇಸ್ಲಾಮೇತರ ಆಂದೋಲನಗಳಿಗೂ ಅಗತ್ಯವಾಗಿದೆ. ಆದ್ದರಿಂದ ಇಸ್ಲಾಮೀ ಆಂದೋಲನಕ್ಕೆ ಕೇವಲ ಪ್ರಾಮಾಣಿಕ ಕಾರ್ಯಕರ್ತರಿದ್ದರೆ ಸಾಲದು, ಅದರೊಂದಿಗೆ ಲಿಲ್ಲಾಹಿಯ್ಯತ್ ಕೂಡಾ ಅಗತ್ಯವಾಗಿ ಇರಬೇಕು. ಸಮುದಾಯವನ್ನು ಧರ್ಮಸಂಸ್ಥಾಪನೆ ಮತ್ತು ಸತ್ಯದ ಸಾಕ್ಷ್ಯದ ಸ್ಥಾನದಲ್ಲಿ ನೇಮಕ ಮಾಡುವಾಗ ಈ ಕಾರ್ಯವು ಕೇವಲ ಅಲ್ಲಾಹನಿಗಾಗಿರಬೇಕು ಎಂದು ತಿಳಿಸಲಾಗಿತ್ತು.

''ವಿಶ್ವಾಸಿಗಳೇ! ನ್ಯಾಯದ ವಾಹಕರಾಗಿರಿ ಮತ್ತು ಅಲ್ಲಾಹನಿಗಾಗಿ(ಸತ್ಯದ) ಸಾಕ್ಷಿಗಳಾಗಿರಿ'' (ಅನ್ನಿಸಾಃ)

ನೈಜ ಇಸ್ಲಾಮೀ ಆಂದೋಲನದ ಏಕೈಕ ಉದ್ದೇಶವಾಗಿರುವ ಇಕಾಮತುದ್ದೀನ್ ಅಥವಾ ಧರ್ಮಸಂಸ್ಥಾಪನೆ ಕೇವಲ ಅಲ್ಲಾಹನಿಗಾಗಿಲ್ಲದಿದ್ದರೆ ಅದಕ್ಕೆ ಯಾವ ಹೆಸರನ್ನು ಬೇಕಾದರೂ ನೀಡಬಹುದು. ಆದರೆ ಅದಕ್ಕೆ ಕುರ್‌ಆನಿನ ಕರೆ, ಇಸ್ಲಾಮೀ ಆಂದೋಲನ, ಇಕಾಮತುದ್ದೀನ್ ಅಥವಾ ಸತ್ಯಸಾಕ್ಷ್ಯ ಎಂಬ ಹೆಸರು ಖಂಡಿತ ನೀಡಲಾಗದು. ಅಲ್ಲಾಹನ ಧರ್ಮದ ಇಕಾಮತ್(ಸಂಸ್ಥಾಪನೆ) ಮಿಡಿಯುವ ಹೃದಯವಾಗಿದ್ದರೆ ಈ ಲಿಲ್ಲಾಹಿಯ್ಯತ್ ಅದರಲ್ಲಿ ಸಂಚರಿಸುವ ರಕ್ತವಾಗಿದೆ. ಇಂತಹ ರಕ್ತವು ಹೃದಯದ ಕೋಣೆಯಲ್ಲಿಲ್ಲದಿದ್ದರೆ ಅದರಲ್ಲಿ ಜೀವಂತಿಕೆ ಇದೆಯೆಂದು ಖಚಿತವಾಗಿ ಹೇಳಲಾಗದು.

'ಅಲ್ಲಾಹನ ಸಂಪ್ರೀತಿ' ಮತ್ತು 'ಲಿಲ್ಲಾಹಿಯ್ಯತ್' ಎಂಬ ಪದಗಳಿಂದ ತಪ್ಪು ತಿಳಿಯಬಾರದು. ಅವುಗಳ ಅಭಾವದ ಪರಿಣಾಮಗಳು 'ಅಲ್ಲಾಹನ ಬಳಿ' ಮತ್ತು ಪರಲೋಕದಲ್ಲಿ ಪ್ರಕಟವಾಗುವುದು, ಈ ಲೋಕದಲ್ಲಂತೂ ಆಗದು. ವೈಯಕ್ತಿಕ ನೆಲೆಯಲ್ಲಿ ಅದು ಸರಿಯಾಗಿದೆ. ಆದರೆ ವ್ಯಕ್ತಿಗಳು ಸೇರಿ ಸಂಘಟನೆಯಾದಾಗ ಅದು ಪ್ರತಿನಿಧಿಸುವ ಆಂದೋಲನಕ್ಕೆ ಈ ವ್ಯತಿರಿಕ್ತ ಪರಿಣಾಮಗಳನ್ನು ಇದೇ ಲೋಕದಲ್ಲಿ ಸಕಾಲದಲ್ಲಿ ಎದುರಿಸಬೇಕಾಗುತ್ತದೆ. ಏಕೆಂದರೆ ಈ ಲೋಕವು ವ್ಯಕ್ತಿಗಳಿಗೆ ಕರ್ಮರಂಗವಾದರೆ ಸಂಘಟನೆಗಳಿಗೆ ಕರ್ಮರಂಗದ ಜೊತೆ ಫಲಿತಾಂಶದ ತಾಣವೂ ಆಗಿರುವುದು. ಆದ್ದರಿಂದ ಒಂದು ಇಸ್ಲಾಮೀ ಆಂದೋಲನದ ವ್ಯಕ್ತಿಗಳ ಹೃದಯಗಳು ಪ್ರಾಮಾಣಿಕತೆ ಮತ್ತು ಲಿಲ್ಲಾಹಿಯ್ಯತ್‌ನಿಂದ ಬರಿದಾಗಿದ್ದರೆ ಅದು ಬುತ್ತಿಯಿಲ್ಲದೆಯೇ ಪ್ರಯಾಣಿಸುತ್ತಲಿದೆಯೆಂದರ್ಥ. ಯಾವ ಬರಡು ಭೂಮಿಯು ಅದರ ಮಸಣವಾಗಲಿದೆಯೆಂದು ಹೇಳಲಾಗದು.

ಇಸ್ಲಾಮೀ ಆಂದೋಲನಗಳ ಅಂತಿಮ ಪರಿಣಾಮದ ಕುರಿತು ಭೌತಿಕ ಮತ್ತು ಬೌದ್ಧಿಕ ತೀರ್ಪು ಇದೇ ಆಗಿದೆ. ಆದ್ದರಿಂದ ಪವಿತ್ರ ಕುರ್‌ಆನ್ ಪದೇ ಪದೇ ಅಲ್ಲಾಹನ ಧರ್ಮದ ಮಾರ್ಗದಲ್ಲಿ ನಡೆಸಲಾಗುವ ಪರಿಶ್ರಮಗಳ ಯಶಸ್ಸು ಅಲ್ಲಾಹನ ಸಹಾಯವನ್ನವಲಂಬಿಸಿದೆಯೆಂಬ ಸತ್ಯವನ್ನು ನೆನಪಿಸುತ್ತದೆ.

**وما النصر إلا من عند الله** 'ಸಹಾಯವು ಅಲ್ಲಾಹನಿಂದ ಮಾತ್ರವಾಗಿದೆ'

(ಆಲಿ ಇಮ್ರಾನ್: 126)

ಇನ್ನು ಯಾವುದಾದರೂ ಒಂದು ತಥಾಕಥಿತ ಇಸ್ಲಾಮೀ ಆಂದೋಲನವು ಸಾಮೂಹಿಕ ನೆಲೆಯಲ್ಲಿ ಅಲ್ಲಾಹನಿಗಾಗಿ ಮತ್ತು ಅವನ ಸಂಪ್ರೀತಿಗಾಗಿಯೇ ಕೆಲಸ ಮಾಡದಿದ್ದರೆ ಅದಕ್ಕೆ ಅಲ್ಲಾಹನ ಸಹಾಯವನ್ನು ನಿರೀಕ್ಷಿಸುವ ಹಕ್ಕಿರುವುದಾದರೂ ಹೇಗೆ? ಅಲ್ಲಾಹನ ನ್ಯಾಯದ ಕಾನೂನು, ಅದು ತನ್ನ ಸಹಾಯಕ್ಕೆ ಅರ್ಹವೆಂದು ಏಕೆ ಭಾವಿಸಬೇಕು? ಅಲ್ಲಾಹನು ನಿರಪೇಕ್ಷನಾಗಿದ್ದಾನೆ. ಅವನು ತನ್ನನ್ನು ಮನದಾಳದಿಂದ ಪ್ರಾರ್ಥಿಸುವ ಮತ್ತು ಅವನಿಗಾಗಿಯೇ ತನ್ನನ್ನು ಅರ್ಪಿಸುವವನಿಗೆ ಮಾತ್ರ ತನ್ನ ಸಹಾಯವನ್ನು ನೀಡುತ್ತಾನೆ. ...قُلْ مَا يَعْبَؤُا بِكُمْ (ಹೇಳಿರಿ: ನೀವು ನನ್ನ ಪ್ರಭುವನ್ನು ಪ್ರಾರ್ಥಿಸದಿದ್ದರೆ ಅವನಿಗೇನಾಗಬೇಕಾಗಿದೆ. 25:77)

ಬೌದ್ಧಿಕ ಮತ್ತು ಅನುಭವದ ದೃಷ್ಟಿಯಿಂದ ನೋಡಿದರೆ ಪ್ರಾಮಾಣಿಕತೆ ಮತ್ತು ಲಿಲ್ಲಾಹಿಯ್ಯತ್‌ನಿಂದ ಬರಿದಾದ ಯಾವುದೇ 'ಇಸ್ಲಾಮೀ' ಆಂದೋಲನದ ವಿಜಯಕ್ಕೆ ಅನಿವಾರ್ಯವಾಗಿರುವ ಆಂತರಿಕ ಒಗ್ಗಟ್ಟು ಎಂದೂ ಲಭಿಸದು. ನೈಜ ಉದ್ದೇಶವು ಕಣ್ಮರೆಯಾಗಿರುವುದರಿಂದ ಅದರ ವಿವಿಧ ಕಾರ್ಯಕರ್ತರು ಮತ್ತು ಅವರ ವರ್ತುಲಗಳು ಬೇರೆ ಬೇರೆ ಉದ್ದೇಶಗಳನ್ನು ಮುಂದಿಟ್ಟು ಕೆಲಸದ ರೂಪುರೇಷೆ ಮತ್ತು ವಿಧಾನಗಳನ್ನು ರೂಪಿಸುವರು. ಪ್ರತಿಯೊಂದು ಗುಂಪೂ ತನ್ನದೇ ಇಷ್ಟದ ಗುರಿಯತ್ತ ಇಡೀ ಆಂದೋಲನ ಮತ್ತು ಸಂಘಟನೆಯನ್ನು ಎಳೆದೊಯ್ಯಲು ಪ್ರಯತ್ನಿಸಬಹುದು. ಇದರ ಪರಿಣಾಮವೆಂಬಂತೆ ವೈಚಾರಿಕ ಏಕತೆ ಮತ್ತು ಪರಸ್ಪರ ಹೊಂದಾಣಿಕೆ ಇಲ್ಲವಾಗಬಹುದು. ಆಂದೋಲನದ ನೌಕೆಯು ಪರಸ್ಪರ ಸಂಘರ್ಷದ ಅಲೆಗಳಿಗೆ ಸಿಲುಕಿ ಕೊನೆಗೂ ಮುಳುಗಿ ಹೋಗುವುದು. ಲೋಕದ ಅತಿ ದೊಡ್ಡ ಮತ್ತು ಆದರ್ಶ ಸತ್ಯಸಂದೇಶದ ಚರಿತ್ರೆಯು ನಮ್ಮ ಮುಂದಿದೆ. ಅದರ ವಾಹಕರಲ್ಲಿ ಪ್ರಾಮಾಣಿಕರು, ಸತ್ಯಸಂಧರು ಮತ್ತು 'ಸತ್ಯದ ಸಾಕ್ಷಿಗಳು' ಹೆಚ್ಚಿನ ಸಂಖ್ಯೆಯಲ್ಲಿದ್ದಾಗ ಅಲ್ಲಾಹನ ಸಹಾಯವು ಅವರ ಮುಂದೆ ದಾರಿ ಸುಗಮಗೊಳಿಸುತ್ತಾ ವಿಜಯವು ಜೊತೆ ಜೊತೆಗೇ ಸಾಗಿತ್ತು. ಅದರ ಮುಂದೆ ದೇಶಕ್ಕೆ ದೇಶಗಳೇ ತಮ್ಮನ್ನು ಅರ್ಪಿಸುತ್ತಾ ಸಾಗಿದುವು. ಆದರೆ ಸಮತೋಲನ ತಪ್ಪಿದಾಗ ಮತ್ತು ಆಂದೋಲನದ ಈ ಧ್ವಜವಾಹಕರಲ್ಲಿ, ಇಖ್ಲಾಸ್ ಮತ್ತು ಲಿಲ್ಲಾಹಿಯ್ಯತ್‌ನ ಸ್ಫೂರ್ತಿಯ ಕೊರತೆಯಿರುವ ನವ ಮುಸ್ಲಿಮರ ಸಂಖ್ಯೆಯು ದೊಡ್ಡ ಪ್ರಮಾಣದಲ್ಲಿ

ಹೆಚ್ಚಾದಾಗ, ಆಂದೋಲನವು ಪರಸ್ಪರ ಭಿನ್ನಾಭಿಪ್ರಾಯ ಮತ್ತು ಸಂಘರ್ಷಗಳ ಬಿರುಗಾಳಿಗೆ ಸಿಲುಕಿ ಬಿಟ್ಟಿತು. ಅಲ್ಲಿಂದಲೇ ಇಸ್ಲಾಮಿನ ಇತಿಹಾಸವು ಒಂದು ಹೊಸ ತಿರುವನ್ನು ಪಡೆಯಿತು. ನಿಕಟಪೂರ್ವ ಕಾಲದಲ್ಲಿ ಸೈಯದ್ ಅಹ್ಮದ್ ಶಹೀದ್ (ರ)ರವರ ಬಳಿ ಎಷ್ಟೊಂದು ಪರಿಶುದ್ಧ, ಧೀರ ಮತ್ತು ಪ್ರಾಮಾಣಿಕ ಜೀವಾರ್ಪಣೆ ಮಾಡುವ ಆದರ್ಶ ಯೋಧರ ಬಂಡವಾಳವಿತ್ತು! ಆದರೆ ದಂಡಿನೊಂದಿಗೆ ಗಡಿಪ್ರದೇಶದ ನಕಲಿ ನಾಣ್ಯಗಳು ದೊಡ್ಡ ಸಂಖ್ಯೆಯಲ್ಲಿ ಬಂದು ಸೇರಿದಾಗ ಭಾರತದ ದಿಗಂತದಲ್ಲಿ ಉದಯಿಸುತ್ತಿದ್ದ ಇಸ್ಲಾಮೀ ಸಂದೇಶದ ಮಿನುಗುವ ನಕ್ಷತ್ರಗಳು ಮೇಲೇಳುತ್ತಿದ್ದಂತೆಯೇ ಅಂಧಕಾರಗಳಲ್ಲಿ ಮರೆಯಾಯಿತು.

ಎರಡನೇ ಕೇಡಿಗೆ ವ್ಯತಿರಿಕ್ತವಾಗಿ ಈ ಆಧ್ಯಾತ್ಮಿಕ ರೋಗದ ವಿಷಯವು ಚಿಕಿತ್ಸೆಯ ದೃಷ್ಟಿಯಿಂದ ಬಹಳ ಮಹತ್ವದ್ದೂ ಸಂಕೀರ್ಣವೂ ಆಗಿದೆ. ಏಕೆಂದರೆ ಈ ರೋಗವು ಅಂತರಾಳ ಅಥವಾ ಅಂತರ್ ಪ್ರಜ್ಞೆಯಲ್ಲಿ ಜನ್ಮ ತಾಳುತ್ತದೆ ಮತ್ತು ಅದೇ ಗುಪ್ತ ಸ್ಥಳದಲ್ಲಿ ಕುಳಿತು ಇಖ್ಲಾಸ್ ಮತ್ತು ಲಿಲ್ಲಾಹಿಯ್ಯತನ್ನು ಗೆದ್ದಲಿನಂತೆ ತಿನ್ನತೊಡಗುತ್ತದೆ. ಅದರಿಂದಾಗಿ ಅವನು ವಿಮರ್ಶಾತ್ಮಕ ದೃಷ್ಟಿಯ ಹಿಡಿತಕ್ಕೆ ಬರುವುದು ದುಸ್ತರವಾಗಿ ಬಿಡುತ್ತದೆ. ಆಳಕ್ಕಿಳಿದು ನೋಡುವ ದೃಷ್ಟಿಗಳಿಗೂ ಅದು ಬೀಳುವುದಿಲ್ಲ. ಒಂದು ವೇಳೆ ಅದರ ಇರುವಿಕೆಯ ಪ್ರಜ್ಞೆ ಮೂಡಿದರೂ ಅದನ್ನು ಸರಿಯಾಗಿ ಒಪ್ಪಿಕೊಳ್ಳುವುದು ಅಷ್ಟು ಸುಲಭವಾಗಿರುವುದಿಲ್ಲ. ಏಕೆಂದರೆ ಅದಕ್ಕೆ ಈಮಾನಿನ ಜಾಗೃತ ಪ್ರಜ್ಞೆ ಮತ್ತು ನೈತಿಕ ಧೈರ್ಯವಂತಿಕೆ ಬೇಕು. ಎರಡನೆಯದಾಗಿ, ಮಾನವನ ಆದಿಶತ್ರು(ಶೈತಾನ್) ವಿಶ್ವಾಸಿಯ ಹೃದಯ ಮತ್ತು ಅದರಲ್ಲಿರುವ ಇಖ್ಲಾಸ್ ಮತ್ತು ಲಿಲ್ಲಾಹಿಯತ್ ತನ್ನ ನಿರಂತರ ಹೋರಾಟದ ಅತಿ ದೊಡ್ಡ ರಂಗವೆಂದು ಪರಿಗಣಿಸುತ್ತಾನೆ. ಆದ್ದರಿಂದ ಆ ರಂಗದ ಜಾಗೃತ ಸ್ಥಳವನ್ನು ಅವನು ಸುಲಭದಲ್ಲಿ ಖಾಲಿ ಬಿಡುವುದಿಲ್ಲ. ಅದಕ್ಕಾಗಿ ಕೊನೆಯ ಹಂತದ ವರೆಗೂ ಮಂಡಿಯೂರಿ ಹೋರಾಡುತ್ತಿರುತ್ತಾನೆ. ಯಾವ ಅಸ್ತ್ರವನ್ನೂ ಬಳಸದೆ ಬಿಡುವುದಿಲ್ಲ. ಕೆಲವೊಮ್ಮೆ ಧಾರ್ಮಿಕತೆಯ ಅಭಿಮಾನವನ್ನು ಕೆರಳಿಸುತ್ತಾನೆ. ಇನ್ನು ಕೆಲವೊಮ್ಮೆ ಚಿತ್ತಾಕಾಂಕ್ಷೆಯ ಮಿಥ್ಯ ಒಣ ಪ್ರತಿಷ್ಠೆಯನ್ನು ಬಡಿದೆಬ್ಬಿಸುತ್ತಾನೆ. ಮತ್ತೆ ಕೆಲವೊಮ್ಮೆ ಸುಂದರ ನೆಪಗಳ ಅಫೀಮು ಕುಡಿಸುತ್ತಾನೆ. ಈ ರೀತಿಯ ನಿರಂತರ ಪ್ರಯತ್ನಗಳಿಂದ ಮಾನವನಲ್ಲಿರುವ ಇಖ್ಲಾಸ್ ಮತ್ತು

ಲಿಲ್ಲಾಹಿಯ್ಯತ್ ಪುನಃ ಸುಖನಿದ್ರೆಗೆ ಜಾರಲೆಂದು ಬಯಸುತ್ತಾನೆ. ಮಾನವನು ತನ್ನಲ್ಲಿರುವ ತಪ್ಪನ್ನು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳುವುದರಲ್ಲಿ ಯಶಸ್ವಿಯಾಗುವುದು ಅಲ್ಲಾಹನ ಮಹಾ ಕೃಪೆಯಿಂದಾಗಿದೆ. ಈ ರೋಗವನ್ನು ಗುರುತಿಸಿದ ನಂತರ ಅದರ ಚಿಕಿತ್ಸೆಯು ಮೂರನೆ ಹಂತವಾಗಿದೆ. ಅದಕ್ಕೆ ಗಟ್ಟಿ ಮನಸ್ಸು, ಸರಿಯಾದ ಮಾರ್ಗೋಪಾಯ, ಸೂಕ್ತ ಪಥ್ಯ ಮತ್ತು ಸುದೀರ್ಘ ಹೋರಾಟದ ಅಗತ್ಯವಿದೆ. ಇಲ್ಲಿ ಒಂದು ಕ್ಷಣದ ನಿರ್ಲಕ್ಷ್ಯವೂ ಗುರಿಯಿಂದ ನೂರಾರು ಮೈಲು ದೂರ ಎಸೆಯಲು ಕಾರಣವಾಗುತ್ತದೆ. ಒಟ್ಟಿನಲ್ಲಿ ಈ ಮಾರ್ಗದ ಎಲ್ಲ ಹಂತಗಳೂ ಕಠಿಣವಾಗಿದ್ದು ಬಹಳ ತಾಳ್ಮೆಯನ್ನು ಬಯಸುತ್ತದೆ. ಆದರೆ ತನ್ನ ಜೀವಿತೋದ್ದೇಶವನ್ನು ಪ್ರೀತಿಸುವವನು ಯಾವ ಸ್ಥಿತಿಯಲ್ಲೂ ಅದನ್ನು ಹಾಳಾಗದಂತೆ ನೋಡಿಕೊಳ್ಳುತ್ತಾನೆ. ಅಂತಹವರು ಈ ಎಲ್ಲ ಹಂತಗಳನ್ನು ಸಸಂತೋಷ ದಾಟಲೇಬೇಕು.

## 2. ಧಾರ್ಮಿಕ ಜ್ಞಾನ ಮತ್ತು ದೃಷ್ಟಿಯ ಕೊರತೆ

ಯಾವುದೇ ಇಸ್ಲಾಮೀ ಆಂದೋಲನವು ಧರ್ಮದ ಮೂಲ ಸ್ರೋತದಿಂದ ಮಾರ್ಗದರ್ಶನ ಪಡೆಯುವ ಅರ್ಹತೆಯನ್ನು ಕಳೆದುಕೊಂಡಿರುವುದು ಅದರ ವೈಫಲ್ಯ ಅಥವಾ ಪತನಕ್ಕೆ ಕಾರಣವಾಗುತ್ತದೆ. ಅದರಿಂದ ಎರಡು ದೋಷಗಳುಂಟಾಗುತ್ತವೆ. ವೈಚಾರಿಕ ಪರಿಶೋಧನೆಯಲ್ಲಿ ಕೊರತೆ ಮತ್ತು ಧಾರ್ಮಿಕ ದೃಷ್ಟಿಯ ದೋಷ. ಅಂದರೆ ಇದರ ಪರಿಣಾಮವಾಗಿ ಆಂದೋಲನದ ಧ್ವಜ ವಾಹಕರಿಗೆ ವೈಚಾರಿಕ ಮಾಂದ್ಯ ಮತ್ತು ಮಾನಸಿಕ ದಾರಿದ್ರ್ಯದ ಪಕ್ಷವಾಯು ಬಾಧಿಸುತ್ತದೆ. ಇನ್ನೊಂದೆಡೆ ವೈಚಾರಿಕ ಅರಾಜಕತೆಯ ಗೊಂದಲ ಹರಡ ತೊಡಗುತ್ತದೆ. ಯಾವುದೇ ಆಂದೋಲನಕ್ಕೆ ವೈಚಾರಿಕ ಸಂಶೋಧನೆಯ ಆಹಾರ ಲಭಿಸಿದಾಗ ಮತ್ತು ಧರ್ಮದ ನೇರ ಸ್ರೋತದಿಂದ ಅದಕ್ಕೆ ನಿರಂತರ ನೀರೊದಗಿಸುತ್ತಿರುವಾಗ ಅದು ಜೀವಂತಿಕೆಯನ್ನೂ ಸರಿಯಾದ ದಿಕ್ಕಿನಲ್ಲಿ ಚಲಿಸುವ ಅರ್ಹತೆಯನ್ನೂ ಪಡೆಯುತ್ತದೆ. ಇದು ಅದರ ಧ್ವಜವಾಹಕರು ಆ ಸ್ರೋತಗಳ ನೇರಜ್ಞಾನ ಹೊಂದಿದಾಗ ಮತ್ತು ಅದರಿಂದ ಮಾರ್ಗದರ್ಶನ ಪಡೆಯುವ ಸಾಮರ್ಥ್ಯವನ್ನು ಹೊಂದಿದಾಗ ಹಾಗೂ ಆ ಸಾಮರ್ಥ್ಯವನ್ನು ಬಳಸುವುದನ್ನು ತಿಳಿದಿರುವಾಗ ಮಾತ್ರ ಸಾಧ್ಯ. ಅದರೊಂದಿಗೆ ಆಂದೋಲನದ ಕಾರ್ಯಕರ್ತರೂ ಧರ್ಮದ

ಸಾಮಾನ್ಯ ತಿಳುವಳಿಕೆ ಮತ್ತು ಅದರ ಸ್ವರೂಪ ಜ್ಞಾನವನ್ನು ಹೊಂದಿರಬೇಕಾದುದು ಅಗತ್ಯ. ಇಸ್ಲಾಮ್ ಮತ್ತು ಅಜ್ಞಾನದ ಕನಿಷ್ಠ ಮೂಲಭೂತ ವ್ಯತ್ಯಾಸವನ್ನು ಮತ್ತು ಧರ್ಮದ ಮೂಲ ತತ್ವಗಳ ಮತ್ತು ಕಲ್ಪನೆಯ ಜ್ಞಾನವನ್ನು ಅರಿತಿರಬೇಕು. ಹಾಗೂ ಸ್ವಯಂ ತಮ್ಮ ಮಿತಿ ಮೇರೆಗಳನ್ನು ಚೆನ್ನಾಗಿ ಬಲ್ಲವರಾಗಿರಬೇಕು. ಆದರೆ ಈ ಸ್ಥಿತಿ ಉಳಿದಿಲ್ಲವಾದರೆ ಮತ್ತು ಜನರು ತಮ್ಮ ಕರ್ತವ್ಯಗಳನ್ನೂ ಮೇರೆಗಳನ್ನೂ ಲೆಕ್ಕಿಸದಿದ್ದರೆ, ಗಣ್ಯರು ಕುರ್‌ಆನ್ ಮತ್ತು ಸುನ್ನತ್ತನ್ನು ತಮ್ಮ ನೈಜ ಮಾರ್ಗದರ್ಶಕವನ್ನಾಗಿ ಮಾಡುವ ಅರ್ಹತೆಯನ್ನು ಕಳಕೊಂಡರೆ ಅಥವಾ ಅರ್ಹತೆಯಿದ್ದರೂ ಅದರಿಂದ ಕಾರ್ಯ ಸಾಧಿಸುವ ಆತ್ಮವಿಶ್ವಾಸವನ್ನು ಹೊಂದಿರದಿದ್ದರೆ ಹಾಗೂ ಇನ್ನೊಂದೆಡೆ ಜನ ಸಾಮಾನ್ಯರು ಕೆಟ್ಟು ಹೋಗಿದ್ದರೆ, ತಮ್ಮ ಸಾಮಾನ್ಯ ಮತ್ತು ನೇರ ಧಾರ್ಮಿಕ ತಿಳುವಳಿಕೆಯ ಆಧಾರದಲ್ಲಿ ತಾವೇ ಧರ್ಮದ ಬೇಡಿಕೆಗಳನ್ನು ನಿರ್ಣಯಿಸಿದರೆ. ತಂತಮ್ಮ ಅಭಿರುಚಿಯ ಪ್ರಕಾರ ಆಂದೋಲನದ ಕಾರ್ಯನೀತಿಯನ್ನು ರೂಪಿಸ ತೊಡಗಿದರೆ, ಕೊನೆಗೆ ಅವರನ್ನು ನೋಡಿ ಜ್ಞಾನದ ಹೊರತಾಗಿ ಫತ್ವಾ(ಧರ್ಮವಿಧಿ) ನೀಡಿದಾಗ ಅವರೂ ದಾರಿ ತಪ್ಪುತ್ತಾರೆ. ಇತರರನ್ನೂ ದಾರಿ ತಪ್ಪಿಸುತ್ತಾರೆ ಎಂಬ ಸ್ಥಿತಿಯುಂಟಾದರೆ, ಅಂತಹ ದಿನಗಳು ಆಂದೋಲನದ ಮಟ್ಟಿಗೆ ಬಹಳ ಕೆಟ್ಟ ದಿನಗಳಾಗಿರುವುದು. ಆಗ ಅದರ ಸ್ಥಿತಿಯು ಚುಕ್ಕಾಣಿಯನ್ನು ಎಸೆದು ದೂರ ಕುಳಿತು ಕೊಂಡ ನಾವಿಕನಂತೆ ಹಾಗೂ ತಂತಮ್ಮ ಕೈಗಳನ್ನು ಚುಕ್ಕಾಣಿಯಾಗಿ ಮಾಡಿ ನಾವೆಯನ್ನು ತಮಗಿಷ್ಟ ಬಂದಲ್ಲಿಗೆ ತೇಲಿಸಿಕೊಂಡು ಹೋಗುವುದರಲ್ಲಿ ಮಗ್ನರಾದ ಪ್ರಯಾಣಿಕರಂತೆ ಆಗುವುದು.

### 3. ವ್ಯಕ್ತಿ ಪೂಜೆ

ಎರಡನೇ ಕಾರಣದೊಂದಿಗೆ ನಿಕಟ ಸಂಬಂಧವಿರುವ ವಿಷಯವೇ ವ್ಯಕ್ತಿ ಪೂಜೆ. ವ್ಯಕ್ತಿಯ ಮೇಲಿನ ವಿಶೇಷ ಭಕ್ತ್ಯಾದರಗಳೇ ಇದಕ್ಕೆ ಕಾರಣ. ಮಾನವನ ಮನೋಶಾಸ್ತ್ರ ಮತ್ತು ಐತಿಹಾಸಿಕ ದಾಖಲೆಗಳ ಅಧ್ಯಯನದಿಂದ ವ್ಯಕ್ತವಾಗುವಂತೆ, ಈ ರೋಗವು ಧಾರ್ಮಿಕ ಆಂದೋಲನಗಳ ಮೇಲೆ ಹೆಚ್ಚು ಆಕ್ರಮಣ ಮಾಡುತ್ತದೆ. ಅದು ಅತಿ ಭಯಾನಕವೂ ಆಗಿರುತ್ತದೆ. ವ್ಯಕ್ತಿ ಪೂಜೆಯೆಂದರೆ ಜನರು ಆಂದೋಲನದಲ್ಲಿ ಒಬ್ಬ ವ್ಯಕ್ತಿಯ ಮೇಲಿನ ಭಕ್ತ್ಯಾದರದಿಂದಾಗಿ ಸೇರಿಕೊಳ್ಳುವುದು.

ಈ ಭಕ್ಯಾದರವೇ ಈ ಸಂಬಂಧದಲ್ಲಿ ಪ್ರಬಲವಾಗಿರುತ್ತದೆ. ಅದು ಆರಂಭದಲ್ಲೇ ಇರಬಹುದು ಅಥವಾ ಅನಂತರ ಈ ಸ್ವರೂಪ ಪಡೆದಿರಬಹುದು. ಇಂತಹ ಮಂದಿ ಏನೇ ನೋಡುವುದಿದ್ದರೂ ಆ ದೊಡ್ಡ ವ್ಯಕ್ತಿಯ ಕಣ್ಣಿನಿಂದಲೇ ನೋಡುತ್ತಿದ್ದಾರೆ. ಏನನ್ನು ನಂಬುವುದಿದ್ದರೂ ಅವರ ದೃಢೀಕರಣದ ನಂತರವೇ ನಂಬುತ್ತಾರೆ. ಇಂತಹ 'ಪಾವನ ವ್ಯಕ್ತಿ'ಯ ಯಾವುದೇ ಅಭಿಪ್ರಾಯ, ಯಾವುದೇ ಫತ್ವಾ ಯಾವುದೇ ಸಿದ್ಧಾಂತವನ್ನು ಬೌದ್ಧಿಕ ಮತ್ತು ಪ್ರತ್ಯಕ್ಷ ಪುರಾವೆಗಳ ತಕ್ಕಡಿಯಲ್ಲಿ ತೂಗಿ ನೋಡಿ ಅದನ್ನು ಸ್ವೀಕರಿಸುವುದು ಅಸಭ್ಯತೆಯೆಂದು ಭಾವಿಸುತ್ತಾರೆ. ಪ್ರವಾದಿಯಲ್ಲದವರ ಅಭಿಪ್ರಾಯಗಳು ಪ್ರಮಾದ ರಹಿತವಲ್ಲವೆಂಬುದನ್ನು ಅವರು ಒಪ್ಪುವುದಿಲ್ಲ. ಆದರೆ ಪ್ರಾಯೋಗಿಕವಾಗಿ ಇಂತಹ ವ್ಯಕ್ತಿಗಳ ಭಕ್ಯಾದರವು ಮನಸ್ಸಿನಲ್ಲಿ ನಾಟಿಕೊಂಡಿರುವವರು, ಅವರ ಇಂತಹ ಅಭಿಪ್ರಾಯ ದುರ್ಬಲವಾಗಿದೆ; ಅದು ಸ್ವೀಕಾರಾರ್ಹವಲ್ಲವೆಂಬುದನ್ನು ಕೇಳಲಿಕ್ಕೂ ತಯಾರಿರುವುದಿಲ್ಲ. ಭಕ್ಯಾದರಗಳ ಈ ಅತಿರೇಕವು ಅವರಿಂದ ನಿರ್ಧಾರ ಶಕ್ತಿ ಹಾಗೂ ಅಸಲಿ-ನಕಲಿಯ ವ್ಯತ್ಯಾಸವನ್ನು ಕಸಿದುಕೊಳ್ಳುತ್ತದೆ. ಇನ್ನೊಂದೆಡೆ, ಆ ವ್ಯಕ್ತಿಯು ತಮ್ಮ ಮಧ್ಯೆಯಿಂದ ಶಾಶ್ವತವಾಗಿ ಹೊರಟು ಹೋದ ಬಳಿಕ, ಇನ್ನೆಲ್ಲಿಗೆ ಹೋಗುವುದು, ಏನು ಮಾಡುವುದು ಎಂದು ತಿಳಿಯದೆ ದಿಗ್ಭ್ರಾಂತರಾಗಿ ಬಿಡುತ್ತಾರೆ. ಆಗ ಅವರಿಗೆ ಆಂದೋಲನದ ಭವಿಷ್ಯದ ಚಿಂತೆಗಿಂತ ಆ ವ್ಯಕ್ತಿ ಮರೆಯದ ದುಃಖ ಹೆಚ್ಚು ಕಾಡುತ್ತಿರುತ್ತದೆ. ಈ ಮನೋಸ್ಥಿತಿಯ ಕೆಲವು ಅಂಶವು ಇಸ್ಲಾಮಿನ ಆರಂಭ ಕಾಲದಲ್ಲೂ ಪ್ರಕಟವಾಗಿತ್ತು. ಆದರೆ ಅದು ಇಂತಹ ಭಾವುಕತೆಯು ವೈಚಾರಿಕ ವಕ್ರತೆಯನ್ನು ಬೆಳೆಯಗೊಡದಂತಹ ಸುವರ್ಣ ಕಾಲವಾಗಿತ್ತು. ಆದ್ದರಿಂದ ಅದರ ಕಿಡಿಯು ಸ್ವಲ್ಪ ಹೊತ್ತು ಕಾಣಿಸಿಕೊಂಡು ಕೂಡಲೇ ನಂದಿಹೋಯಿತು. ಆದರೆ ಇದೇ ವಿಷಯ ಸೈಯದ್ ಅಹ್ಮದ್ ಶಹೀದ್‌ರವರ ಆಂದೋಲನದ ವೇಳೆ ತಲೆಯೆತ್ತಿದಾಗ, ಅದು ತನ್ನ ಅಂತಿಮ ಪರಿಣಾಮವನ್ನು ತೋರ್ಪಡಿಸಿತು. ಅಂದರೆ ವ್ಯಕ್ತಿಯ ಮೇಲಿನ ಅತಿರೇಕ ಭಕ್ಯಾದರವು ಅಸಂಖ್ಯಾತ ಯೋಧರನ್ನು ಹೋರಾಟ ರಂಗದಿಂದ ಹಿಂದೆ ಸರಿಸಿ ಧ್ಯಾನಾಸಕ್ತರನ್ನಾಗಿ ಮಾಡಿ ಮೂಲೆಗೆ ಸೇರಿಸಿತು.

ಒಂದು ಆಂದೋಲನದ ಕಾರ್ಯಕರ್ತರ ಮನದಲ್ಲಿ ತಮ್ಮ ನೈಜ ನಾಯಕ ಪ್ರವಾದಿ ಮುಹಮ್ಮದ್(ಸ) ಆಗಿದ್ದಾರೆ ಮತ್ತು ತಮ್ಮ ಪರಿಶ್ರಮಗಳಿಗೆ ಅಲ್ಲಾಹನ ಸಂಪ್ರೀತಿಯ ಹೊರತು ಬೇರಾವುದೇ ಉದ್ದೇಶವಿಲ್ಲವೆಂಬ ವಾಸ್ತವಿಕತೆ ಚೆನ್ನಾಗಿ ರೂಢಮೂಲವಾಗಿಲ್ಲವೆಂದಾದರೆ ಆಂದೋಲನದ ಭವಿಷ್ಯದ ದೃಷ್ಟಿಯಿಂದ ಈ ಸ್ಥಿತಿಯು ಅತ್ಯಂತ ಅಪಾಯಕಾರಿಯಾಗಿರುವುದು.

### 4. ಧರ್ಮದ ಅಸಂತುಲಿತ ಕಲ್ಪನೆ

ಈ ಕಲ್ಪನೆಯು ಕೆಲವೊಮ್ಮೆ ಜ್ಞಾನದ ಕೊರತೆಯಿಂದಾಗಿ ತಾನಾಗಿಯೇ ಹುಟ್ಟಿಕೊಳ್ಳುತ್ತದೆ. ಕೆಲವೊಮ್ಮೆ ಅದಕ್ಕೆ ಬಾಹ್ಯ ಕಾರಣಗಳೂ ಇರುತ್ತವೆ. ಅಂದರೆ ಅದು ಇತರ ಕೆಲವು ಅಪೂರ್ಣ ಅಸಂತುಲಿತ ಧರ್ಮದ ಕಲ್ಪನೆಯ ವಿರುದ್ಧ ಪ್ರತಿಕ್ರಿಯೆಯ ಫಲವಾಗಿರುತ್ತದೆ. ಧರ್ಮದ ಮರುಸ್ಥಾಪನೆಯ ಯಾವುದೇ ಆಂದೋಲನವು ಆರಂಭವಾಗುವ ಕಾಲವು, ಧರ್ಮದ ರಕ್ಷಣೆಯ ಹೊಣೆ ಹೊತ್ತಿರುವ ಸಮುದಾಯವು ತನ್ನ ಕರ್ತವ್ಯದಿಂದ ಅಲಕ್ಷ್ಯವಾಗಿರುವ ಅಥವಾ ಕನಿಷ್ಠ ಪಕ್ಷ ಅದಕ್ಕಾಗಿ ಕೆಲಸ ಮಾಡದಿರುವ ಕಾಲವಾಗಿರುತ್ತದೆ. ಅದರ ಈ ನೀತಿಗೆ ಸಾಮಾನ್ಯವಾಗಿ ಎರಡು ಕಾರಣಗಳಿರುತ್ತವೆ.

1) ಸಮುದಾಯವು ಕರ್ತವ್ಯಪ್ರಜ್ಞೆ ಮತ್ತು ಜೀವನದ ತುಡಿತವನ್ನು ಕಳೆದುಕೊಂಡಿರುತ್ತದೆ.

2) ಅದರ ಧಾರ್ಮಿಕ ಪ್ರಜ್ಞೆಯು ಒಂದು ಹಂತದವರೆಗೆ ಅಪೂರ್ಣ ಮತ್ತು ಅಸಂತುಲಿತವಾಗಿರುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಮತ್ತು ಈ ಕಾರಣಗಳಿಂದಾಗಿ ಕೆಲವರು ಅಲ್ಲಾಹನ ಅನುಗ್ರಹದಿಂದ ಕಾರ್ಯರಂಗಕ್ಕಿಳಿಯುತ್ತಾರೆ. ಅವರು ಪತಿತಾವಸ್ಥೆಯಲ್ಲಿದ್ದ ಸತ್ಯಧರ್ಮದ ಧ್ವಜವನ್ನು ಎತ್ತಿ ಹಿಡಿಯುವಾಗ ಜನರೆಲ್ಲ ಅದರತ್ತ ಆಕರ್ಷಿತರಾಗಿ ಬಂದು ಸೇರಬೇಕೆಂದು ಮನಸಾರೆ ಬಯಸುತ್ತಾರೆ. ವಿಶೇಷವಾಗಿ ದೇವನನ್ನೂ ಪರಲೋಕವನ್ನೂ ಮರೆತಿಲ್ಲದ ಮತ್ತು ಸ್ವಾರ್ಥಿಗಳು, ಅಹಂಕಾರಿಗಳಲ್ಲದವರಾದ 'ಮುಸ್ಲಿಮರ' ಬಗ್ಗೆ ಅವರ ಬಯಕೆ ತೀವ್ರವಾಗಿರುತ್ತದೆ. ಸಮುದಾಯದ ಜೀವನೋದ್ದೇಶವು ಸತ್ಯಸಾಕ್ಷ್ಯ ಮತ್ತು ಧರ್ಮ ಸಂಸ್ಥಾಪನೆಯೆಂದು ಸಾರುವ

ಮತ್ತು ನಮಾಝ್-ಉಪವಾಸಗಳ ಆಜ್ಞೆ ನೀಡಲಾಗಿರುವ ಸೂಕ್ತಗಳನ್ನು ಅವರು ನಂಬಿದವರಾಗಿರುತ್ತಾರೆ. ಈ ಸ್ವಾಭಾವಿಕ ಆಗ್ರಹದೊಂದಿಗೆ ಅವರು ಜನರನ್ನು ಆಹ್ವಾನಿಸಲಿಕ್ಕಾಗಿ ಗಲ್ಲಿಗಲ್ಲಿಗೆ ಘೋಷಣೆ ಕೂಗುತ್ತಾ ಸಾಗುತ್ತಾರೆ. ಪ್ರತಿಯೊಂದು ಬಾಗಿಲನ್ನು ತಟ್ಟುತ್ತಾರೆ. ಗುಡಿಸಲಿನಿಂದ ಅರಮನೆಯ ವರೆಗೆ ಮತ್ತು ಆರಾಧನಾಲಯಗಳಿಂದ ಸಂಸತ್ತಿನ ವರೆಗೆ ಹೋಗುತ್ತಾರೆ. ಆದರೆ ಅದರ ಫಲ ಮಾತ್ರ ಅವರ ನಿರೀಕ್ಷೆಗಿಂತ ಬಹಳ ಕಡಿಮೆಯಾಗಿರುತ್ತದೆ. ಅವರ ಕರೆಗೆ ಹೃದಯ ಕವಾಟಗಳು ತೆರೆಯದಿರುವುದನ್ನು, ಮಾತ್ರವಲ್ಲ ಅದರಿಂದ ವ್ಯತಿರಿಕ್ತ ಪರಿಣಾಮವುಂಟಾಗುವುದನ್ನು ಕಂಡು ಅವರು ದುಃಖಿತರಾಗುತ್ತಾರೆ. ಪರಿಸ್ಥಿತಿ ಹೀಗೇಕಾಗುತ್ತಿದೆಯೆಂದು ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಜನರ ಮುಂದಿಡಲಾಗದ ವಿಷಯದ ಸತ್ಯತೆ, ಮಹತ್ವ ಮತ್ತು ಅಗತ್ಯದ ಕುರಿತು ಯಾವ ಮುಸ್ಲಿಮನಿಗೂ ಭಿನ್ನಾಭಿಪ್ರಾಯವಿರಲು ಸಾಧ್ಯವಿಲ್ಲದಿರುವಾಗ ಈ ನಿರಾಕರಣೆಯೇಕೆಂದು ಅವರನ್ನು ಚಿಂತೆಗೀಡು ಮಾಡುತ್ತದೆ. ಈ ಭಾವನೆಯ ಕುರಿತು ಅವರು ಜನರ ಈ ವರ್ತನೆಯ ವೈಚಾರಿಕ ಮತ್ತು ಮಾನಸಿಕ ವಿಚಾರ ಮಂಥನ ನಡೆಸಿದಾಗ ಅದಕ್ಕೆ ಈಗಾಗಲೇ ವಿವರಿಸಲಾದ ಎರಡು ಕಾರಣಗಳೇ ಕಂಡು ಬರುತ್ತದೆ. ಅಂದರೆ ಕರ್ತವ್ಯ ಪ್ರಜ್ಞೆಯ ಕೊರತೆ ಮತ್ತು ಧರ್ಮದ ವಿಕೃತ ಮತ್ತು ಅಸಂತುಲಿತ ಕಲ್ಪನೆ. ಆದ್ದರಿಂದ ತಮ್ಮ ಧ್ಯೇಯೋದ್ದೇಶಕ್ಕಾಗಿ ಈ ಕೆಡುಕಿನ ಕಾರಣಗಳನ್ನು ನೀಗಿಸಲು ತೀವ್ರವಾಗಿ ಪ್ರಯತ್ನಿಸಬೇಕೆಂದು ಅವರು ಭಾವಿಸುತ್ತಾರೆ. ಈಗ, ಮೊದಲ ಕೆಡುಕು ಅಥವಾ ರೋಗದ ನಿವಾರಣೆಗಾಗಿ ಅವರು ಬೋಧಿಸ ಹೊರಟಾಗ, ಕೆಲವೊಮ್ಮೆ ಅವಮಾನದಿಂದ ತಲೆತಗ್ಗಿಸಿ, ಇನ್ನು ಕೆಲವೊಮ್ಮೆ ತಮ್ಮ ಕುಂದು ಕೊರತೆಗಳನ್ನು ಒಪ್ಪಿಕೊಂಡಾದರೂ ಕನಿಷ್ಠ ಪಕ್ಷ ಅದನ್ನು ಆಲಿಸಲಾಗುತ್ತದೆ. ಆದರೆ ಎರಡನೆಯ ಕೆಡುಕಿನ ಸುಧಾರಣೆ ಅಷ್ಟು ಸುಲಭವಲ್ಲ, ಅದಕ್ಕೆ ಕಾರಣವಿದೆ. ಜನರ ಧಾರ್ಮಿಕ ಕಲ್ಪನೆಗಳಲ್ಲಿ ಯಾವುದಾದರೂ ದೋಷ ಮತ್ತು ಅಸಮತೋಲನವನ್ನು ವಿಮರ್ಶಿಸದೆ ಅವುಗಳನ್ನು ನಿವಾರಿಸುವುದು ಸಾಧ್ಯವಿಲ್ಲ. ಆದ್ದರಿಂದ ಅನಿವಾರ್ಯವಾಗಿ ಈ ಅರೋಚಕ ಕರ್ತವ್ಯವನ್ನು ಈಡೇರಿಸಲೇ ಬೇಕಾಗುತ್ತದೆ. ಧರ್ಮದ ಈ ವಿಕೃತ ಕಲ್ಪನೆಯು ಜನರಲ್ಲಿ ಸರಿಯಾದ ಕರ್ತವ್ಯ ಪ್ರಜ್ಞೆಯನ್ನು ಬೆಳೆಯಲು ಬಿಡುವುದಿಲ್ಲ.

ಮಾತ್ರವಲ್ಲ, ಕೆಲವೊಮ್ಮೆ ಹೆಚ್ಚಿನ ವೇಳೆ ಈ ಪುಟಿದೇಳುವ ಭಾವನೆಯನ್ನು ತಟ್ಟಿ ಮಲಗಿಸಲಾಗುತ್ತದೆಂದು ಕಾಣುವಾಗ ಈ ಅನಿವಾರ್ಯ ಕರ್ತವ್ಯದ ಈಡೇರಿಕೆಯು ಪ್ರಥಮ ಆದ್ಯತೆಯಾಗಿ ಬಿಡುತ್ತದೆ. ವಿಶ್ವಾಸ-ಶ್ರದ್ಧೆಗಳ ಮೇಲೆ ವಿಮರ್ಶೆ ಸರಿಯಾಗಿದ್ದರೂ ಸಂತುಲಿತವಾಗಿದ್ದರೂ ಅದನ್ನು ಮೌನವಾಗಿ ಸಹಿಸಲಾಗುವುದಿಲ್ಲ. ಅದು ಕೂಡಾ ಮನುಷ್ಯರ ಸಾಮಾನ್ಯ ವಿಶ್ವಾಸವನ್ನಲ್ಲ. ಅವರ ಅತಿ ಪ್ರಿಯವಾದ ನಂಬಿಕೆಗಳನ್ನು ವಿಮರ್ಶಿಸುವಾಗ! ವಿಮರ್ಶೆಯ ಮಾತು ಆರಂಭಗೊಳ್ಳುವಷ್ಟರಲ್ಲೇ ಜನರು ಭುಗಿಲೇಳುತ್ತಾರೆ. ನಾಲ್ದೆಸೆಯಿಂದಲೂ ಆಂದೋಲನ ವಿರೋಧಿ ಅಲೆಗಳೇಳುತ್ತವೆ. ಅದರ ಧ್ಯೇಯೋದ್ದೇಶದ ಮೇಲೆಯೇ ಆಕ್ರಮಣ ಆರಂಭವಾಗುತ್ತದೆ. ಹಠ-ದ್ವೇಷ ತಾಂಡವವಾಡುತ್ತದೆ. ಮುಂದಿನಿಂದಲೂ ಹಿಂದಿನಿಂದಲೂ, ಕೆಲವೊಮ್ಮೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ದಾಳಿ ನಡೆಯುತ್ತದೆ. ಈ ಸ್ಥಿತಿಯಿಂದ ಆಂದೋಲನದ ಕಾರ್ಯಕರ್ತರು ಕಂಗೆಡದಿರುವುದಿಲ್ಲ. ಇದು ಸ್ವಾಭಾವಿಕವೂ ಹೌದು. ಈಗ ಅವರಲ್ಲೂ ಒಂದು ವಿಶೇಷ ಪ್ರತಿಕ್ರಿಯೆ ಪ್ರಕಟವಾಗತ್ತದೆ. ಅಧರಿಂದಾಗಿ ಈ ಧರ್ಮದ ಅಪೂರ್ಣ ಕಲ್ಪನೆಯ ವಿರುದ್ಧ ಅವರ ಧೋರಣೆ ಇನ್ನಷ್ಟು ಕಠಿಣವಾಗುತ್ತದೆ. ಏಕೆಂದರೆ ಈ ಪರಿಸ್ಥಿತಿಗೆಲ್ಲ ಇಂತಹ ವಿಕೃತ ಕಲ್ಪನೆಗಳೇ ಕಾರಣವೆಂದು ಅವರು ಸ್ಪಷ್ಟವಾಗಿ ಕಾಣುತ್ತಾರೆ. ಇಂತಹ ಧಾರ್ಮಿಕ ಮನೋಭಾವದವರು ಮುಸ್ಲಿಮರನ್ನು ಆಂದೋಲನದ ಧ್ಯೇಯದತ್ತ ಬರಲು ಬಿಡುವುದಿಲ್ಲ. ವಸ್ತುತಃ ಮುಸ್ಲಿಮ್ ಸಮುದಾಯಕ್ಕೆ ಅದರ ಹೊರತು ಬೇರೆ ಜೀವಿತೋದ್ದೇಶವೇ ಇಲ್ಲ. ಆದ್ದರಿಂದ ಈ ಕಲ್ಪನೆಗಳ ಮೇಲೆ ತೀವ್ರ ಪ್ರಹಾರ ನಡೆಸುವ ಅಗತ್ಯವಿದೆಯೆಂದು ಅವರು ಭಾವಿಸುತ್ತಾರೆ.

ಆದರೆ ಇನ್ನೊಂದೆಡೆ, ಆಂದೋಲನದ ವಾಹಕರು ಕೂಡಾ ಧರ್ಮದ ಕಲ್ಪನೆಯ ಪ್ರತಿಕ್ರಿಯಾತ್ಮಕ ಅಸಮತೋಲನದ ಅಪಾಯಕ್ಕೆ ಸಿಲುಕಿ ಬಿಡುವ ಸಂಕೀರ್ಣ ಸಮಯ ಇದುವೇ ಆಗಿರುತ್ತದೆ. ಏಕೆಂದರೆ ಆಗ ಅವರ ಪ್ರತಿಕ್ರಿಯೆಯು ತೀವ್ರವಾಗುತ್ತದೆ ಮತ್ತು ಅದರಲ್ಲಿ ಅತಿರೇಕವುಂಟಾಗುವ ಭೀತಿಯಿರುತ್ತದೆ. ಅವರು ತಮಗರಿವಿಲ್ಲದಂತೆಯೇ ಒಂದು ತಪ್ಪಿನ ಉತ್ತರವಾಗಿ ಇನ್ನೊಂದು ತಪ್ಪನ್ನು ಎಸಗಿ ಬಿಡುವ ಸಾಧ್ಯತೆಯಿರುತ್ತದೆ. ಈ ಸಂದರ್ಭದಲ್ಲಿ ಅಲ್ಲಾಹನು ಉನ್ನತ

ಮಟ್ಟದ ಧಾರ್ಮಿಕ ದೃಷ್ಟಿ, ಶಾಂತ ಸ್ವಭಾವ ಮತ್ತು ವೈಚಾರಿಕ ಘನತೆಯನ್ನು ದಯಪಾಲಿಸಿರುವವರು ಮಾತ್ರ ಇದರಿಂದ ಸುರಕ್ಷಿತರಾಗಬಲ್ಲರು. ಅನ್ಯಥಾ ಆಂದೋಲನ ವಿರೋಧಿಗಳ ಅಬ್ಬರದಿಂದ ಸಾಮಾನ್ಯ ಜನರೂ ಉಗ್ರವಾದದತ್ತ ಸಾಗಬಹುದು. ಸಮತೋಲನದ ರಾಜಮಾರ್ಗವನ್ನು ಬಿಟ್ಟು ಇನ್ನೊಂದು ಅಸಮತೋಲನಕ್ಕೆ ಬಲಿಯಾಗಬಹುದು. ವಿರೋಧಿಸುವವರು ಧರ್ಮದಲ್ಲಿಲ್ಲದ ಯಾವುದೇ ವಿಷಯಕ್ಕೆ ಅತಿ ಮಹತ್ವದ ಸ್ಥಾನ ನೀಡಲು ಹಠ ಹಿಡಿಯುತ್ತಾರೆಂದಾದರೆ, ಈ ಮಂದಿ ಅದಕ್ಕೆ ಧರ್ಮದಲ್ಲಿರುವ ಅದರ ನೈಜ ಸ್ಥಾನವನ್ನೂ ನೀಡಲು ತಯಾರಾಗುವುದಿಲ್ಲ. ಅದೇ ರೀತಿ ಅವರು ಯಾವುದೇ ವಿಷಯಕ್ಕೆ ಅದರ ನೈಜ ಮಹತ್ವ ನೀಡಲು ನಿರಾಕರಿಸುತ್ತಾರೆಂದಾದರೆ, ಈ ಮಂದಿ ಅದರ ನೈಜ ಸ್ಥಾನದಿಂದ ಬಹಳ ಮೇಲೇರಿಸುತ್ತಾರೆ.

ಉದಾ: ಅಸಂತುಲಿನ ಮನೋಭಾವದವರು ಅಲ್ಲಾಹನ ಗುಣಗಳ ಪೈಕಿ ಒಂದು ಗುಣ ಮತ್ತದರ ಬೇಡಿಕೆಗಳಿಗೆ ಬಹಳ ಮಹತ್ವ ಕೊಡುವಾಗ ಉಳಿದ ಗುಣಗಳು ಹೆಚ್ಚಿನಂಶ ಅಡಿಗೆ ಬೀಳುತ್ತವೆ. ಇದರಿಂದಾಗಿ ಅವರ ಧಾರ್ಮಿಕ ಕಲ್ಪನೆ ಮತ್ತು ಭಾವನೆಗಳ ಸ್ವರೂಪವೇ ಅಸಂತುಲಿತವಾಗುತ್ತದೆ. ಇಂತಹ ಜನರೊಂದಿಗೆ ಆಂದೋಲನದ ಕಾರ್ಯಕರ್ತರ ಪ್ರತಿಕ್ರಿಯೆಯು ವ್ಯತಿರಿಕ್ತವಾಗಿ ಅವರೇ ಅದನ್ನು ಅಳವಡಿಸಿಕೊಳ್ಳುವಂತಹ ಸ್ಥಿತಿಗೆ ತಲುಪಿಸುತ್ತದೆ. ಅಂದರೆ ಇತರರ ಮನದಲ್ಲಿ ಅಡಿಗೆ ಬಿದ್ದಿದ್ದ ಆ ಗುಣಗಳನ್ನು ಇವರು ತಮ್ಮ ಮನ-ಮಸ್ತಿಷ್ಕಗಳಲ್ಲಿ ಬಲವಾಗಿ ತುಂಬಿಕೊಳ್ಳುತ್ತಾರೆ. ಇದರಿಂದಾಗಿ ಮೊದಲಿನ ಗುಣದ ಬೇಡಿಕೆಗಳು ಅಡಿಗೆ ಬೀಳುತ್ತದೆ.

ಇದೊಂದು ತಾತ್ವಿಕ ಉದಾಹರಣೆ. ಇದರಂತೆಯೇ ಇಸ್ಲಾಮಿನ ಇತರ ಶಿಕ್ಷಣಗಳನ್ನೂ ಊಹಿಸಬಹುದು. ಈ ರೀತಿಯ ಪ್ರತಿಕ್ರಿಯಾತ್ಮಕ ಅಸಮತೋಲನದ ಅರ್ಥವೇ ಧರ್ಮದ ನೈಜ ಮತ್ತು ಪರಿಪೂರ್ಣ ಅರ್ಥ ಇನ್ನು ಕಾರ್ಯಗತಗೊಳ್ಳಲಾರದು ಮತ್ತು ಅದರ ನೈಜ ಸ್ಥಿತಿಯು ಇನ್ನೂ ನಿಗೂಢವಾಗಿರುವುದೆಂದೇ ಆಗಿದೆ. ವಸ್ತುತಃ ಧಾರ್ಮಿಕ ಕಲ್ಪನೆಯ ಪ್ರತಿಯೊಂದು ಅಸಮತೋಲನವೂ ಅಸಮತೋಲನವೇ ಆಗಿದೆ. ಅದನ್ನು ಯಾವುದೇ ಆಂದೋಲನದ ವಕ್ತಾರರ ಗುಂಪು ಕೈಗೊಂಡಿರಲಿ ಅಥವಾ ನಿಷ್ಕ್ರಿಯ ವಿಭಾಗವು

ಕೈಗೊಂಡಿರಲಿ. ಅದರ ಹಾನಿಯಿಂದ ಯಾವ ಸ್ಥಿತಿಯಲ್ಲೂ ಮುಕ್ತಿಯಿಲ್ಲ, ಬಹುಶಃ ಮೊದಲ ರೂಪದಲ್ಲಿ ಈ ಹಾನಿ ಇನ್ನಷ್ಟು ಅಪಾಯಕಾರಿಯಾಗಿದೆ. ಆದ್ದರಿಂದ ಅಸಂತುಲಿತ ಧಾರ್ಮಿಕ ಕಲ್ಪನೆಯೊಂದಿಗೆ ಮಾಡುವ ಪ್ರಯತ್ನವನ್ನು ಬೇರಾವುದೇ ಅರ್ಥದಲ್ಲಿ ಧಾರ್ಮಿಕ ಪ್ರಯತ್ನವೆನ್ನ ಬಹುದಾದರೂ 'ಇಸ್ಲಾಮಿನ ನವೋತ್ಥಾನ' ಮತ್ತು 'ಧರ್ಮ ಸಂಸ್ಥಾಪನೆ'ಯ ಪ್ರಯತ್ನವೆನ್ನುವುದು ಯಾವ ನೆಲೆಯಲ್ಲೂ ಸರಿಯಾಗದು. ಇಂತಹ ಪ್ರಯತ್ನಗಳ ಪರಿಣಾಮವು 'ಧರ್ಮದ ನೈಜ ಸಂಸ್ಥಾಪನೆ'ಯ ದೃಷ್ಟಿಯಿಂದ ಪ್ರತಿಕೂಲವಾಗಿಯೇ ಪರಿಣಮಿಸುವುದು. ಒಂದೆಡೆ, ಅದು ಸರಿಯಾದ ಧಾರ್ಮಿಕ ಚಿಂತನೆ ಮತ್ತು ಗುಣವಿರುವ ಜನರ ಮಟ್ಟಿಗೆ ತನ್ನ ಬಾಗಿಲನ್ನು ಮುಚ್ಚುವುದು. ಇನ್ನೊಂದೆಡೆ, ಅದರ ಹೆಜ್ಜೆಯು ನೈಜ ಹೆದ್ದಾರಿಯಿಂದ ಸರಿದು ಏಳುವುದು. ಕಟ್ಟ ಕಡೆಗೆ ಅದು ಸಮುದಾಯದ ಚರಿತ್ರೆಯಲ್ಲಿ ಒಡಕಿನ ಒಂದು ಹೊಸ ಅಧ್ಯಾಯವನ್ನಷ್ಟೆ ಸೇರ್ಪಡೆಗೊಳಿಸುವುದು.

**5. ವರ್ಗ ಪಕ್ಷಪಾತ:**

ಇದು ಮಾನವನ ಒಂದು ಸಾಮಾನ್ಯ ದೌರ್ಬಲ್ಯವಾಗಿದೆ. ತನ್ನನ್ನು ಅಳೆಯುವ ಮಾನದಂಡದಿಂದ ಇತರರನ್ನು ಅಳೆಯಲು ಅವನು ತಯಾರಿರುವುದಿಲ್ಲ, ತನ್ನ ಬಗ್ಗೆ ಇತರರು ಉತ್ತಮ ಭಾವನೆಯಿರಿಸಬೇಕೆಂದು ಬಯಸುತ್ತಾನೆ. ಆದರೆ ಇತರರ ಬಗ್ಗೆ ಅವನ ಮನಸ್ಸು ಸಂಕುಚಿತಗೊಳ್ಳುತ್ತದೆ. ಎಲ್ಲ ಸಮರ್ಥನೆಗಳೂ ರಿಯಾಯಿತಿಗಳೂ ತನ್ನ ಪಾಲಿಗಿರಬೇಕು, 'ಕಾಠಿಣ್ಯ'ವೆಲ್ಲ ಇತರರಿಗಿರಬೇಕೆಂದು ಅವನು ಬಯಸುತ್ತಾನೆ. ಈ ಪಕ್ಷಪಾತ ಮತ್ತು ಅನ್ಯಾಯದ ಧೋರಣೆಯನ್ನು ತನ್ನ ವೈಯಕ್ತಿಕ ವಿಷಯಗಳಿಗೆ ಮಾತ್ರ ಸೀಮಿತಗೊಳಿಸುವುದಿಲ್ಲ, ಇದೇ ಕೆಟ್ಟ ಧೋರಣೆಯನ್ನು ತನ್ನ ಕೌಟುಂಬಿಕ, ಜನಾಂಗೀಯ, ಜಾತೀಯ, ದೇಶೀಯ, ವರ್ಗೀಯ ಮತ್ತು ಸಂಘಟನಾ ಕಾರ್ಯಗಳ ವಿಶಾಲ ರಂಗಗಳಿಗೂ ವಿಸ್ತರಿಸುತ್ತಾನೆ. ಕೆಲವೊಮ್ಮೆ ಅವನ ಈ ಅಸಂಬದ್ಧ ಆಸಕ್ತಿಯು ಇನ್ನೂ ಹೆಚ್ಚು ಪ್ರಗತಿ ಹೊಂದುತ್ತದೆ. ಇದಕ್ಕೆ ಕಾರಣವಿದೆ. ಒಂದು ವೇಳೆ ವೈಯಕ್ತಿಕ ನೆಲೆಯಲ್ಲಿ ಅವನು ಈ ವರ್ತನೆಯನ್ನು ಕೈಗೊಂಡರೆ ಅವನಿಗೆ ಶಾಪಗಳ, ಖಂಡನೆಗಳ ಸುರಿಮಳೆ ಬೀಳುತ್ತದೆ. ಸ್ವಯಂ ಅವನ ಆತ್ಮ ಸಾಕ್ಷಿಯೂ, ಅದು ಸತ್ತಿರದಿದ್ದರೆ, ಒಳಗಿನಿಂದ ಅವನನ್ನು ಚುಚ್ಚುತ್ತಿರುತ್ತದೆ. ಆದರೆ

ದೇಶ ಮತ್ತು ಸಮುದಾಯದ ಹೆಸರಲ್ಲಿ, ಪಕ್ಷ ಮತ್ತು ಸಂಘಟನೆಯ ಹೆಸರಲ್ಲಿ ಸತ್ಯ-ನ್ಯಾಯವನ್ನು ಬಲಿ ಕೊಡುತ್ತಾನೆಂದಾದರೆ ಅವನತ್ತ ಬೆರಳು ತೋರಿಸುವವರು ಯಾರೂ ಇರುವುದಿಲ್ಲ. ತದ್ವಿರುದ್ಧವಾಗಿ ಅವನನ್ನು ಪ್ರಶಂಸೆಗಳ ಹೂಮಾಲೆಗಳಿಂದ ಅಲಂಕರಿಸಲಾಗುತ್ತದೆ. ಝಿಂದಾಬಾದ್ ಘೋಷಣೆಗಳು ಮೊಳಗುತ್ತದೆ. ಅವನನ್ನು ತಲೆಯ ಮೇಲೆ ಹೊತ್ತು ಕೊಳ್ಳಲಾಗುತ್ತದೆ. ಈ ಪ್ರಶಂಸೆಯ ಅಬ್ಬರ ಮತ್ತು ಪ್ರದರ್ಶನಗಳಿಂದ ಅವನ ಆತ್ಮಸಾಕ್ಷಿಯೂ ಬೀಗುತ್ತದೆ ಅಥವಾ ಆತ್ಮವಂಚನೆಗೆ ಬಲಿಯಾಗುತ್ತದೆ.

ಮಾನವ ಚಿತ್ತದ ಈ ದೌರ್ಬಲ್ಯವು ಬಹಳ ತೀವ್ರವಾಗಿದ್ದು, ಮಾಂತ್ರಿಕ ಶಕ್ತಿಯನ್ನು ಹೊಂದಿರುತ್ತದೆ. ಪವಿತ್ರ ಭಾವನೆ ಮತ್ತು ನೈಜ ಸ್ಫೂರ್ತಿಯೊಂದಿಗೆ ಇಸ್ಲಾಮೀ ಆಂದೋಲನದ ಧ್ವಜವನ್ನು ಎತ್ತಿ ಹಿಡಿದಿರುವ ವರ್ಗವೂ ಇದರ ಆಕ್ರಮಣದಿಂದ ಪಾರಾದೀತೆನ್ನುವಂತಿಲ್ಲ. ಇಸ್ಲಾಮಿನ ಸಂಪೂರ್ಣ ಇತಿಹಾಸ ನಮ್ಮ ಮುಂದಿದೆ. ಈ ವರ್ಗ ಪಕ್ಷಪಾತವು ಸಮುದಾಯವನ್ನು ಅನೇಕ ಬಾರಿ ಒಡೆದಿದೆ. ಅದನ್ನು ಇತಿಹಾಸದ ಬಾಯಿಂದಲೇ ಕೇಳಬಹುದು. ಎಷ್ಟೋ ಧಾರ್ಮಿಕ ಆಂದೋಲನಗಳು ಧರ್ಮದ ಸೇವೆ ಮತ್ತು ಸಂಸ್ಥಾಪನೆಯ ಸ್ಫೂರ್ತಿಯೊಂದಿಗೆ ಎದ್ದರೂ ಇದೇ ಅಜ್ಞಾನ ಜನ್ಯ ಪಕ್ಷಪಾತಕ್ಕೆ ಸಿಲುಕಿ ಎಲ್ಲಿಂದೆಲ್ಲಿಗೋ ಹೋಗಿ ಬಿಟ್ಟವು. ವಾಸ್ತವದಲ್ಲಿ ಆಂದೋಲನಗಳು ಆರಂಭದಲ್ಲಿ ಈಮಾನಿನ ಲೆಕ್ಕ ಪರಿಶೋಧಕದ ಜತೆಗಿರುತ್ತದೆ ಮತ್ತು ಕುರ್‌ಆನಿನ ನ್ಯಾಯ ತಕ್ಕಡಿಯು ಕೈಯಲ್ಲೂ ಇರುತ್ತದೆ. ಆದರೆ ಮಾರಕ ರೋಗದ ಆಕ್ರಮಣವಾದಾಗ ತನ್ನ ಗುಂಪು ಮತ್ತು ತನ್ನ ಸಂಘಟನೆಯೇ ಎಲ್ಲವೂ ಆಗಿರುತ್ತದೆ. ಅದರ ಹಿತವು ಸತ್ಯದ ಹಿತವಾಗುತ್ತದೆ. ಅದರ ರಕ್ಷಣೆಯು ಸತ್ಯದ ರಕ್ಷಣೆಯಾಗುತ್ತದೆ. ಅದರ ಪ್ರತಿಯೊಂದು ಸಿದ್ಧಾಂತ ಮತ್ತು ವರ್ತನೆಯ ಮೇಲೆ ಕಣ್ಣೋಡಿಸುವುದು ಉತ್ತಮ ಭಾವನೆ ಮತ್ತು ಗೌರವದಿಂದಾಗಿರಬೇಕು, ಅದರಲ್ಲೂ ಎಲ್ಲಾದರೂ ಒಂದು ಕೊರತೆ ಕಂಡು ಬಂದರೆ ಎರಡೂ ಕೈಗಳಿಂದ ಕಣ್ಣು ಮುಚ್ಚಬೇಕು ಎಂದು ಭಾವಿಸಲಾಗುತ್ತದೆ.

ತದ್ವಿರುದ್ಧವಾಗಿ ಇತರರ ಪ್ರತಿಯೊಂದು ಸಿದ್ಧಾಂತ ಮತ್ತು ವರ್ತನೆಯು ಕೆಟ್ಟ ಭಾವನೆಗೆ ಅರ್ಹವೆಂದು ಭಾವಿಸಲಾಗುತ್ತದೆ. ಅದರ ಉತ್ತಮ ಅಂಶಗಳನ್ನು

ಒಪ್ಪಿಕೊಳ್ಳುವುದರಲ್ಲಿ ಲೋಭ ತೋರಲಾಗುತ್ತದೆ, ಅಂದರೆ ತನ್ನ ಸಂಘಟನೆಯು ಸತ್ಕರ್ಮದೊಂದಿಗೆ ತಪ್ಪಾಗುವ ಸಾಧ್ಯತೆಯೂ ಇರಬಲ್ಲ ಮನುಷ್ಯರ ಸಂಘಟನೆಯಲ್ಲ, ಅದು ದೇವಚರರ ಪಾವನ ಗುಂಪಾಗಿದ್ದು ಯಾವುದೇ ವೈಚಾರಿಕ ಮತ್ತು ವ್ಯಾವಹಾರಿಕ ಪ್ರಮಾದವು ಹತ್ತಿರ ಸುಳಿಯುವುದೂ ಸಾಧ್ಯವಿಲ್ಲ. ಸತ್ಯ, ನಿಷ್ಠೆ ಮತ್ತು ಸನ್ಮಾರ್ಗದ ಈ ಗುತ್ತಿಗೆಯು ಸ್ವಯಂ ಒಂದು ದೊಡ್ಡ ಪಥಭ್ರಷ್ಟತೆಯಾಗಿದೆ. ಇದು ಈಮಾನಿನ ನಿಸ್ಪೃಹತೆ ಮತ್ತು ಲಿಲ್ಲಾಹಿಯ್ಯತ್‌ನ ರುಚಿಯಿಂದ ಹೃದಯವು ಬರಿದಾಗಿರುವ ಲಕ್ಷಣವಾಗಿದೆ.

ಈ ಪಥಭ್ರಷ್ಟತೆ ಮತ್ತು ವಕ್ರತೆಯ ಅಪಾಯಕಾರಿ ಅಂಶವು, ಅದು ಸತ್ಯದ ಪರ ಮತ್ತು ಬಲಿಷ್ಠ ಈಮಾನಿನ ವೇಷ ತೊಟ್ಟುಕೊಂಡಿರುವುದಾಗಿದೆ. ಅದರಿಂದಾಗಿ ಅದಕ್ಕೆ ಬಹಳ ಆಕರ್ಷಣೆಯಿರುತ್ತದೆ. ಮನುಷ್ಯನಿಗೆ ಅದರ ಬಗ್ಗೆ ಪಶ್ಚಾತ್ತಾಪದ ಬದಲು ಒಂದು ಬಗೆಯ ಹೆಮ್ಮೆಯಿರುತ್ತದೆ. ಏಕೆಂದರೆ ಸತ್ಯದ ವೇಷ ತೊಟ್ಟಿರುವ ಪಥಭ್ರಷ್ಟತೆಯು ಬಹಳ ಆಕರ್ಷಣೀಯವಾಗಿರುತ್ತದೆ. ಈ ಅಜ್ಞಾನಜನ್ಯ ಈಮಾನಿನ ಆಪತ್ತಿಗೆ ಸಿಲುಕಿದವನು ಸತ್ಯವು ಸೂರ್ಯ ಪ್ರಕಾಶಕ್ಕಿಂತ ಮಿಗಿಲಾಗಿ ಕಂಡರೂ ಅದರ ಸಂಬಂಧವು 'ಹೊರಗಿನಿಂದ' ಇದ್ದರೆ ಧಿಕ್ಕರಿಸುವುದರಲ್ಲಿ ಹಿಂದೆ ಮುಂದೆ ನೋಡಲಾರ. ಯಹೂದಿ ವಿದ್ವಾಂಸರಂತೆ, 'ನೀವು ನಿಮ್ಮ ಧರ್ಮದ ಅನುಯಾಯಿಯಾಗಿರುವವನ ಮಾತನ್ನು ಮಾತ್ರ ಕೇಳಿರಿ' ಎಂದು ಇತರರಿಗೂ ಉಪದೇಶಿಸ ತೊಡಗುತ್ತಾನೆ.

ಇಂತಹ ಮಾರಕ ರೋಗಕ್ಕೆ ತುತ್ತಾದ ವರ್ಗದ ಬಗ್ಗೆ, ಅದರ ಪ್ರಯತ್ನಗಳಿಂದ ಸತ್ಯಧರ್ಮಕ್ಕೆ ವಿಜಯ ಸಿಕ್ಕೀತು ಎಂದು ನಿರೀಕ್ಷಿಸುವುದೇ ಮೂರ್ಖತನವಾದೀತು. ಯಾರ ದೃಷ್ಟಿಯಲ್ಲಿ ಸಂಘಟನಾ ಸಂಬಂಧಗಳು ಮತ್ತು ಮಿಥ್ಯವರ್ಗೀಯ ಪ್ರತಿಷ್ಠೆಗೆ ಈ ಸ್ಥಾನ ಲಭಿಸಿರುವುದೋ ಮತ್ತು ಸತ್ಯವನ್ನು ಅಂಗೀಕರಿಸುವುದರಲ್ಲಿ 'ತನ್ನ' ಮತ್ತು 'ಇತರರ' ಮಧ್ಯೆ ತಾರತಮ್ಯವಿರಿಸುವನೋ ಅವನು ಕೇವಲ ತನ್ನ ವಚನವನ್ನು ಎತ್ತಿ ಹಿಡಿಯ ಬಯಸುತ್ತಾನೆ. ಅಲ್ಲಾಹನ ವಚನದ ಉತ್ಥಾನವು ತನ್ನ ಗುರಿಯೆಂದು ಅವನು ಹೇಳುವುದಾದರೆ ಅದು ಬರೀ ಸುಳ್ಳು. ಯಾರೂ ಅಲ್ಲಾಹನ ಮತ್ತು ತನ್ನ ವರ್ಗದ 'ಆರಾಧನೆ'ಯನ್ನು ಒಟ್ಟೊಟ್ಟಿಗೆ ಮಾಡುವುದಿಲ್ಲ.

### 6. ಅಭಿವ್ಯಕ್ತಿ ಸ್ವಾತಂತ್ರ್ಯದ ದುರುಪಯೋಗ

ಇದೊಂದು ಪ್ರಧಾನ ಕಾರಣವಾಗಿದ್ದು ಇದರ ದುರುಪಯೋಗವು ಮೇರೆ ಮೀರಿದರೆ ಆಂದೋಲನವು ಅರಾಜಕತೆಗೆ ಬಲಿಯಾಗುತ್ತದೆ. ಇದೊಂದು ಆಪತ್ತಾಗಿದ್ದು ಇದರ ಉಪಸ್ಥಿತಿಯಲ್ಲಿ ಆಂದೋಲನವು ಒಂದು ಹೆಜ್ಜೆಯನ್ನೂ ಮುಂದಿಡಲಾರದು. ಅದಂತೂ ಹಿಂದಕ್ಕೆ ಹೆಜ್ಜೆ ಹಾಕಿ ವೇಗವಾಗಿ ಎಡವ ತೊಡಗುವುದು. ಎತ್ತರಕ್ಕೇರುವ ರೈಲುಗಾಡಿಯ ಇಂಜಿನ್ ಕಡಿದು ಪ್ರತ್ಯೇಕವಾದಂತೆ!

ಆಲೋಚನಾ ಶಕ್ತಿಯು ಮನುಷ್ಯನ ವಿಶೇಷತೆಯಾಗಿದೆ. ಆ ಶಕ್ತಿಯ ಬಳಕೆಯು ಪ್ರತಿಯೊಬ್ಬ ಮಾನವನ ಜನ್ಮಸಿದ್ಧ ಹಕ್ಕಾಗಿರುವ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯವಿರಲಾರದು. ಅದರಿಂದ ಅವನನ್ನು ವಂಚಿತಗೊಳಿಸುವಂತಿಲ್ಲ.

ಅದೇ ರೀತಿ ಈ ಹಕ್ಕನ್ನು ತಾನಾಗಿ ಬಳಸದೆ ಇರುವವನು ತನ್ನನ್ನು ಮಾನವತೆಯ ಸ್ಥಾನದಿಂದ ಕೆಳಗುರುಳಿಸುತ್ತಾನೆ. ಆದ್ದರಿಂದ ಪ್ರಕೃತಿ ಧರ್ಮವಾದ ಇಸ್ಲಾಮ್ ಮಾನವನು ಆಲೋಚಿಸಿ ಕೆಲಸ ಮಾಡುವುದು ಅವನ ಮೂಲಭೂತ ಹಕ್ಕು ಮಾತ್ರವಲ್ಲ, ಅದು ಅವನ ಕರ್ತವ್ಯವೂ ಆಗಿದೆಯೆಂದು ಸಾರುತ್ತದೆ. ಬುದ್ಧಿ ಉಪಯೋಗಿಸದೆ ಕೆಲಸ ಮಾಡುವವನನ್ನು ಮೃಗ ಸಮಾನವಾಗಿ ಪರಿಗಣಿಸುತ್ತದೆ. ಉದ್ದೇಶ ಪೂರ್ವಕವಾಗಿ ಸತ್ಯವನ್ನು ಬಹಿರಂಗ ಪಡಿಸಲು ಹಿಂಜರಿಯುವವನನ್ನು 'ಮೂಗ ಪಿಶಾಚಿ' ಎಂದು ಸಾರಿದೆ. ಆದರೆ ಈ ಸ್ಥಾನವನ್ನು ಅವನು ಬುದ್ಧಿ, ವಿವೇಕ ಮತ್ತು ಅಭಿಪ್ರಾಯ ಸ್ವಾತಂತ್ರ್ಯದ ಸರಿಯಾದ ಸಂತುಲಿತವಾದ ಮತ್ತು ಕರ್ತವ್ಯ ಪ್ರಜ್ಞೆಯ ಬಳಕೆಗೆ ನೀಡಿದ್ದಾನೆಯೇ ಹೊರತು ತಪ್ಪಾದ ಮತ್ತು ಲಂಗುಲಗಾಮಿಲ್ಲದ ಬಳಕೆಗಲ್ಲ. ಬುದ್ಧಿ ಮತ್ತು ಅಭಿವ್ಯಕ್ತಿಯ ತಪ್ಪು ಬಳಕೆಯು ಅದನ್ನು ಬಳಸದಿರುವುದರಷ್ಟೇ ಕೆಡುಕಾಗಿದೆ. ಆದ್ದರಿಂದ ಸಮುದಾಯದ ಮಂದಿ ತಮ್ಮ ಮೇರೆಗಳನ್ನು ಮರೆತು ಅಭಿವ್ಯಕ್ತಿ ಸ್ವಾತಂತ್ರ್ಯದ ಹೊಣೆಗೇಡಿ ಬಳಕೆಯಲ್ಲಿ ಸ್ವಚ್ಛಂದವಾಗಿರುವ ಅಭಿವ್ಯಕ್ತಿ ಪ್ರಕಟಿಸುವ ಪ್ರತಿಯೊಬ್ಬನೂ ತನ್ನದೇ ಅಭಿಪ್ರಾಯಕ್ಕೆ ಅಂಟಿಕೊಂಡಿರುವ ಮತ್ತು ಅದರ ಪರಿಣಾಮವಾಗಿ ಅರಾಜಕತೆಯು ಭುಗಿಲೇಳುವ ಕಾಲವು ಸಮುದಾಯದ ಪಾಲಿಗೆ ಅತ್ಯಂತ ಕೆಟ್ಟ ಕಾಲವೆಂದು ಅದು ಹೇಳುತ್ತದೆ. ಪ್ರವಾದಿ(ಸ) ಅವರು ಎಚ್ಚರಿಕೆಯ ರೂಪದಲ್ಲಿ ಹೀಗೆ ಹೇಳಿದ್ದಾರೆ– ''ಲೋಭವು

ಎಲ್ಲೆಡೆ ಪ್ರಾಬಲ್ಯ ಪಡೆದಾಗ, ಮನುಷ್ಯನ ನಿಯಂತ್ರಣವು ಅವನ ಚಿತ್ತಾಕಾಂಕ್ಷೆಯ ಕೈಯಲ್ಲಿ ಬಂದಾಗ, ಧರ್ಮಕ್ಕಿಂತ ಲೌಕಿಕತೆಗೆ ಆದ್ಯತೆ ನೀಡಿದಾಗ, ಪ್ರತಿಯೊಬ್ಬ **ಅಭಿಪ್ರಾಯವುಳ್ಳವನೂ ತನ್ನ ಅಭಿಪ್ರಾಯಕ್ಕೆ ಅಂಟಿಕೊಂಡಾಗ**, ನಿಮಗೂ ಕೂಡಾ ನೀವು ಈ ಪೈಕಿ ಯಾವುದಾದರೊಂದು ಕೆಡುಕಿನಲ್ಲಿ ಸಿಲುಕಿಕೊಂಡಿದ್ದೀರೆಂದು ಭಾಸವಾದಾಗ, ನಿಮ್ಮದೇ ಚಿಂತೆ ನಿಮಗಿರಲಿ, ಇತರರನ್ನು ಅವರ ಪಾಡಿಗೆ ಬಿಟ್ಟು ಬಿಡಿರಿ'' (ಮಿಶ್ಕಾತ್)

ದಪ್ಪಕ್ಷರದಲ್ಲಿರುವ ವಾಕ್ಯವನ್ನು ಗಮನಿಸಿರಿ. 'ಪ್ರತಿಯೊಬ್ಬನೂ ತನ್ನ ಅಭಿಪ್ರಾಯಕ್ಕೆ ಅಂಟಿಕೊಂಡಾಗ' ಎಂದು ಹೇಳುವ ಬದಲು 'ಅಭಿವ್ಯಕ್ತಿ ಪ್ರಕಟಿಸುವ ಪ್ರತಿಯೊಬ್ಬನೂ ತನ್ನದೇ ಅಭಿಪ್ರಾಯಕ್ಕೆ ಅಂಟಿಕೊಂಡಾಗ' ಎಂದು ಹೇಳಲಾಗಿದೆ. ಅಂದರೆ ಈ ಸ್ಥಿತಿಯು ಒಬ್ಬ ಪ್ರಾಮಾಣಿಕ ಮುಸ್ಲಿಮನಿಗೆ ಒಳಿತಿನ ಆದೇಶ ಮತ್ತು ಸಮುದಾಯ ಸುಧಾರಣೆಯ ಬಗ್ಗೆ ಧೈರ್ಯಗುಂದಿಸಲು ಸಾಕಾಗುತ್ತದೆ. ಇನ್ನು ಪರಿಸ್ಥಿತಿಯ ಬೇಡಿಕೆ ಏನೆಲ್ಲ ಆಗುವುದೋ! ಪ್ರತಿಯೊಬ್ಬನೂ, ಅಭಿಪ್ರಾಯ ಹೊಂದಿರುವ ಸಾಮರ್ಥ್ಯ ಹೊಂದಿರಲಿ ಇಲ್ಲದಿರಲಿ, ಒಂದು ಅಭಿಪ್ರಾಯ ಪ್ರಕಟಿಸಿ ಅದಕ್ಕೇ ಅಂಟಿಕೊಂಡಿರುವನು. ಅದರಲ್ಲೇ ಹಠ ಹಿಡಿಯುವುದನ್ನು ರೂಢಿಸಿಕೊಳ್ಳುವನು.

ಇದು ಓರ್ವ ಸಾಮಾನ್ಯ ಮನುಷ್ಯನಿಂದಲೂ ಗುಣಪಡಿಸಲು ಸಾಧ್ಯವಿಲ್ಲದ ಮಾರಕ ರೋಗವಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಅಸಂತುಲಿತ ಮತ್ತು ಹೊಣೆಗೇಡಿ ಬಳಕೆಯು ಎಷ್ಟೊಂದು ಅಪಾಯಕಾರಿ ಕ್ಷೋಭೆಯಾಗಿದೆಯೆಂಬುದು ಪ್ರಸ್ತುತ ಯುಕ್ತಿಪೂರ್ಣ ಪ್ರವಾದಿ ವಚನದಿಂದ ಸ್ಪಷ್ಟವಾಗುತ್ತದೆ.

ಒಂದು ಸಂಘಟನೆಯಲ್ಲಿ ಅಭಿಪ್ರಾಯ ನೀಡುವ ಸಾಮರ್ಥ್ಯವಿರುವ ವ್ಯಕ್ತಿಗಳು ಅಗತ್ಯವಾಗಿ ಇರಬೇಕು. ಒಬ್ಬನು ಚೆನ್ನಾಗಿ ಚಿಂತನ-ಮಂಥನ ನಡೆಸಿ ಒಂದು ಅಭಿಪ್ರಾಯಕ್ಕೆ ತಲಪಿದರೆ, ಸೂಕ್ತ ಸಂದರ್ಭದಲ್ಲಿ ಅದನ್ನು ಆಧಾರ ಸಹಿತ ಪ್ರಸ್ತುತ ಪಡಿಸುವ ಪೂರ್ಣ ಹಕ್ಕು ಅವನಿಗಿದೆ. ಆದರೆ ತನ್ನ ಅಭಿಪ್ರಾಯವನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕೆಂದು ಹಠ ಹಿಡಿಯುವ ಹಕ್ಕು ಅವನಿಗಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ತನ್ನ ಅಭಿಪ್ರಾಯ ತಪ್ಪಾಗಿರಲೂ ಇತರರ ಅಭಿಪ್ರಾಯ ಸರಿಯಾಗಿರಲೂ

ಸಾಧ್ಯವಿದೆಯೆಂಬ ನಿಲುವನ್ನು ಹೊಂದಿರಬೇಕು. ಚರ್ಚೆಯ ವೇಳೆ ಅವನ ದೃಷ್ಟಿಯು ವಿಷಯದ ಎಲ್ಲ ಮಗ್ಗುಲುಗಳಿಗೂ ತಲುಪದಿರಬಹುದು ಅಥವಾ ಇತರರು ತಮ್ಮ ಅಭಿಪ್ರಾಯಗಳಿಗೆ ನೀಡುವ ಆಧಾರಗಳು ಅವನಿಗೆ ಸರಿಯಾಗಿ ಅರ್ಥವಾಗದಿರಬಹುದು. ಈ ಎಲ್ಲ ಸಾಧ್ಯತೆಗಳ ಹೊರತಾಗಿಯೂ ಅವನಿಗೆ ತನ್ನ ಅಭಿಪ್ರಾಯವೇ ಸರಿಯೆಂದು ತೋಚುವುದಾದರೂ ಇತರರನ್ನು ತನ್ನ ಅಭಿಪ್ರಾಯಕ್ಕೆ ಸಹಮತವುಳ್ಳವರಾಗಿ ಮಾಡಲಾಗದಿದ್ದರೂ ಬಹುಮತದಿಂದಾಗುವ ತೀರ್ಮಾನವು ತನ್ನ ವಿರುದ್ಧವಾದರೆ, ಈಗ ಅವನು ವಿಶಾಲ ಹೃದಯದೊಂದಿಗೆ ಆ ತೀರ್ಮಾನವನ್ನು ಒಪ್ಪಿಕೊಳ್ಳಬೇಕು. ಕಾರ್ಯರಂಗದಲ್ಲಿ ತನ್ನ ಅಭಿಪ್ರಾಯವನ್ನು ಕೈ ಬಿಡಬೇಕು. ಆದರೆ ಅದು ಆಂದೋಲನದ ಧ್ಯೇಯೋದ್ದೇಶಗಳನ್ನು ಬಹಿರಂಗವಾಗಿ ಅಳಿಸಿ ಹಾಕುವಂತಹದ್ದಾಗಿರಬಾರದು ಮತ್ತು ಇಸ್ಲಾಮಿನ ಸ್ಪಷ್ಟ ಆದೇಶಗಳನ್ನು ಕಡೆಗಣಿಸಿರುವಂತಹದ್ದಾಗಿರಬಾರದು. ಆದರೆ ಸಂಶೋಧನಾತ್ಮಕ ಭಿನ್ನಾಭಿಪ್ರಾಯಗಳ ಸ್ವರೂಪದ್ದಾಗಿರುವ ವರೆಗೆ ತನ್ನ ಅಭಿಪ್ರಾಯಕ್ಕೇ ಅಂಟಿಕೊಂಡಿರುವ ಅಧಿಕಾರ ಅವನಿಗಿಲ್ಲ. ಅನ್ಯಥಾ ಆಂದೋಲನ ಮತ್ತು ಸಂಘಟನೆಯ ಜನರು ಸಾಮೂಹಿಕ ತೀರ್ಮಾನಗಳ ಬದಲು ತಮ್ಮ ಒಲವನ್ನು ಮಾತ್ರವಲ್ಲ, ತಮ್ಮ ಪೂರ್ವ ನಿರ್ಧಾರಿತ ಅಭಿಪ್ರಾಯಗಳನ್ನೂ ಬಲಿಯರ್ಪಿಸಲು ತಯಾರಿಲ್ಲದಿದ್ದರೆ ಅದರ ಭವಿಷ್ಯವೇ ಹಾಳಾಗಬಹುದು. ತನ್ನ ಅಭಿಪ್ರಾಯವೇ ನಿರ್ಣಾಯಕವೆಂದು ಸಾರುವ ಹಕ್ಕು ಅಲ್ಲಾಹನ ಪ್ರವಾದಿ(ಸ) ಗಿಂತ ಹೆಚ್ಚು ಇನ್ನಾರಿಗಿದೆ? ಆದರೆ ಅವರು ಕೂಡಾ ಹಲವು ಸಂದರ್ಭಗಳಲ್ಲಿ ಇತರರ ಅಭಿಪ್ರಾಯಗಳನ್ನು ಕೇಳಿ ತಮ್ಮ ಅಭಿಪ್ರಾಯವನ್ನು ಕೈ ಬಿಟ್ಟದ್ದಿದೆ. ಒಂದು ವೇಳೆ ಸಹಾಬಿಗಳ ಒಮ್ಮತದ ಅಭಿಪ್ರಾಯದ ವಿರುದ್ಧ ಏನಾದರೂ ತೀರ್ಮಾನ ಕೈಗೊಳ್ಳುತ್ತಿದ್ದರೆ, ಅದನ್ನು ಅನುಸರಿಸಲು ಯಾವ ವ್ಯಕ್ತಿಯೂ ನಿರಾಕರಿಸುತ್ತಿರಲಿಲ್ಲ. ಹಾಗಿರುವಾಗ ತನ್ನ ಅಭಿಪ್ರಾಯಕ್ಕೆ ಅಂಟಿಕೊಳ್ಳುವ ಅಧಿಕಾರ ಇನ್ನಾರಿಗಿದೆ. ಅದಂತೂ ಮಾನವನ ಅಭಿಪ್ರಾಯವಲ್ಲ, ದೈವಿಕ ಆದೇಶವಾಗಿದೆ. ಅದನ್ನು ವಿಮರ್ಶಿಸುವುದು ಮತ್ತು ನಿರಾಕರಿಸುವುದು ಇಸ್ಲಾಮ್ ಮತ್ತು ಈಮಾನ್ ನಿಂದಲೇ ಕೈತೊಳೆದುಕೊಳ್ಳುವ ಧೋರಣೆಯಾಗಿದೆ.

ಒಟ್ಟಿನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಒಂದೆಡೆಯಾದರೆ, ಆತ್ಮ ಪ್ರಶಂಸೆ ಮತ್ತು ಅಭಿವ್ಯಕ್ತಿಯ ಹಠವು ಇನ್ನೊಂದು ವಿಷಯವಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಆರೋಗ್ಯಕರ ಬಳಕೆಯಿಂದ ಇಸ್ಲಾಮೀ ಆಂದೋಲನದ ಸರ್ವಶಕ್ತಿಯೂ ತನ್ನ ವಿರೋಧಿ ರಂಗದ ಮಿಥ್ಯ ಶಕ್ತಿಗಳ ವಿರುದ್ಧ ವ್ಯಯವಾಗುತ್ತದೆ. ಅದರ ಹೆಜ್ಜೆಗಳು ಭದ್ರವಾಗಿ ಮುನ್ನಡೆಯುತ್ತದೆ. ಆದರೆ ಅಭಿವ್ಯಕ್ತಿಯ ಹಠ ಮತ್ತು ಆತ್ಮ ಪ್ರಶಂಸೆಯ ಹಾಲಾಹಲದಿಂದ ಕಲುಷಿತ ಆಂದೋಲನ ಮತ್ತು ಸಂಘಟನೆಯು ಪುರೂರವನ ಆನೆಯಂತೆ ತನ್ನದೇ ದಂಡಿನ ಮೇಲೆ ಮುಗಿ ಬೀಳುತ್ತದೆ. ಅದರ ಪರಿಣಾಮವಾಗಿ ಆಂದೋಲನವು ತನ್ನದೇ 'ಯೋಧರ' ಕೈಯಿಂದ 'ಹುತಾತ್ಮ'ವಾಗುತ್ತದೆ.

ಸಮುದಾಯದ ಚರಿತ್ರೆಯು ಈ ವಾಸ್ತವಿಕತೆಯ ಸಾಕ್ಷ್ಯಗಳಿಂದ ತುಂಬಿದೆ. ಖಿಲಾಫತೆ ರಾಶಿದಃದ ಕೊನೆಯಿಂದಲೇ ಆರಂಭಗೊಂಡ ಸಮುದಾಯದೊಳಗಿನ ವಿವಾದ-ಭಿನ್ನಾಭಿಪ್ರಾಯಗಳು ಇಂದಿಗೂ ತಣಿದಿಲ್ಲ. ಆಚಾರ-ವಿಚಾರಗಳ ಏಕತೆಯ ದುಂದುಭಿ ಬಾರಿಸುತ್ತಾ ಬಂದಿದ್ದ ಧರ್ಮದ ಅನುಯಾಯಿಗಳು 70-72 ತುಂಡುಗಳಾಗಿ ಛಿದ್ರಗೊಂಡಿದ್ದಾರೆ. ಅದಕ್ಕೆ ಮುಖ್ಯ ಕಾರಣ ಭಿನ್ನಾಭಿಪ್ರಾಯದ ವಿಷಯಗಳಲ್ಲಿ ಕಂಡು ಬರುವ ಅನಗತ್ಯ ಹಠಮಾರಿತನವಾಗಿದೆ. ಬರಬರುತ್ತಾ ಈಗ ಕೆಲವು ಕ್ಷುಲ್ಲಕ ಸಮಸ್ಯೆಗಳ ರಕ್ಷಣೆಯೇ 'ಸತ್ಯಸಾಕ್ಷ್ಯ'ವಾಗಿ ಬಿಟ್ಟಿರುವಂತಹ ದುಃಸ್ಥಿತಿಗೆ ತಲಪಿದೆ. ಈ ನಿಟ್ಟಿನಲ್ಲಿ ದೊಡ್ಡ ಕಷ್ಟವೇನೆಂದರೆ ಅಭಿಪ್ರಾಯದ ಹಠವಾದಿ ರೋಗಿಗಳಿಗೆ ಸಾಮಾನ್ಯವಾಗಿ ತಮ್ಮ ರೋಗದ ಪ್ರಜ್ಞೆಯೇ ಇರುವುದಿಲ್ಲ. ಅವರು ಅದನ್ನೇ ಆರೋಗ್ಯದ ಪರವಾನಿಗೆಯೆಂದು ಭಾವಿಸುತ್ತಾರೆ. ಅವರು ಇಂತಿಂತಹ ಅಭಿಪ್ರಾಯವನ್ನು ಕೈ ಬಿಡುವುದು ಇಸ್ತಿಕಾಮತ್‌ಗೆ (ಸತ್ಯದಲ್ಲಿ ಸ್ಥಿರವಾಗಿರುವುದಕ್ಕೆ) ವಿರುದ್ಧವೆಂದು ಭಾವಿಸುತ್ತಾರೆ.

ಈ ರೋಗವು ಉಲ್ಬಣಗೊಂಡರೆ ಅವರ ಒಂದೊಂದು ಶ್ವಾಸವೂ ಭಿನ್ನತೆ ಮತ್ತು ಒಡಕಿನ ಮಾರಕ ಕ್ರಿಮಿಗಳನ್ನು ಉಗುಳ ತೊಡಗುತ್ತದೆ. ಸಮಾಜವು ಗೊಂದಲದ ಗೂಡಾಗಿ ಪರಿಣಮಿಸುತ್ತದೆ. ಹೇಳಲು ಒಂದೇ ಗುರಿಯತ್ತ ಒಂದೇ ಮಾರ್ಗದಲ್ಲಿ ಸಾಗುವ ಸಂಯುಕ್ತ ಹೆಜ್ಜೆಗಳ ಸಾಲು! ಆದರೆ ವಾಸ್ತವದಲ್ಲಿ ಬೇರೆ ಬೇರೆ ಕಣಿವೆಗಳಲ್ಲಿ ಅಲೆದಾಡುವ ಪ್ರಯಾಣಿಕರ ವಿಭಿನ್ನ ಗುಂಪುಗಳು ಪ್ರತಿಯೊಂದು ಗುಂಪೂ 'ತನಗೆ

ಲಭಿಸಿದುದರಲ್ಲಿ ಸಂತುಷ್ಟ' ಎಂಬ ರೀತಿಯಲ್ಲಿರುತ್ತದೆ. ಅಲ್ಲಾಹನ ಧರ್ಮದ ಪುನರುತ್ಥಾನ ಮಾಡುವ ಮತ್ತು ಅದನ್ನು ಕುರ್‌ಆನ್, ಸುನ್ನತ್‌ನ ಪುಟಗಳಿಂದ ಜೀವನದ ವಿಶಾಲ ರಂಗಗಳ ವರೆಗೆ ಪೂರ್ಣ ಚೈತನ್ಯ ಮತ್ತು ಪರಿಪೂರ್ಣ ರೂಪದಲ್ಲಿ ಜಾರಿಗೊಳಿಸ ಬಯಸುವ ಪ್ರತಿಯೊಂದು ಆಂದೋಲನವೂ ಈ ವಿಷಯದಲ್ಲಿ ಅಲ್ಲಾಹನ ಅಭಯ ಯಾಚಿಸಬೇಕು.